ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ವೈಚಾರಿಕ ತಿಂಗಳ ಡೈಜೆಸ್ಟ್

ಸಂಪುಟ ೧ ಆಗಸ್ಟ್, ೨೦೦೦ ಸಂಚಿಕೆ ೧

ಕಾಶ್ಮೀರ/ ರಾಜಕೀಯ ಪಕ್ಷಗಳ ಚೆಂಡಾಟ

✲

ರಾಜಕಾರಣ ಮತ್ತು ಸೇವಾ ಸಂಸ್ಥೆಗಳು

✲

ಒಂದಾಗಬೇಕೆ, ಹಾಳಾಗಬೇಕೆ?

✲

ನಾಗರೀಕತೆಯ ಪ್ರಗತಿ - ಮೂಲ ಶಿಕ್ಷಣ

✲

ತತ್ವಕ್ಕಾಗಿ ರಾಜಿನಾಮೆ ಇತ್ತ ಮಂತ್ರಿ
ಯಶೋಧರಾ ದಾಸಪ್ಪ

✲

ತಾಯಿ ಕಸ್ತೂರಬಾ ಎಲ್ಲರ ಬಾ

✲

ಸಮಯದ ನಿರ್ವಹಣೆಯಲ್ಲಿ ಬಲಮೆದುಳಿನ ಪಾತ್ರ

★ ಈ ಸಂಚಿಕೆಯಲ್ಲಿ ★

ಹಗುರಾಗಿಹ ಮೈ, ಕೆಸರಿಲ್ಲದ ಮನ
ಹಂಗಿಲ್ಲದ ಬದುಕು
ಕೇಡಿಲ್ಲದ ನುಡಿ ಕೇಡೆಣಿಸದ ನಡೆ
ಸಾಕಿವು – ಇಹಕೂ ಪರಕೂ
ಮೇಲೇನಿದೆ ಇದಕೂ?

–ಪು.ತಿ.ನ.

ಜನಪದ ವಿಚಾರ

ವೈಚಾರಿಕ ತಿಂಗಳ ಡೈಜೆಸ್ಟ್

ಸಂಪುಟ : ೧ ಸಂಚಿಕೆ : ೧

ಆಗಸ್ಟ್ ೨೦೦೦

ಸಂಪಾದಕ

ಸುರೇಂದ್ರ ಕೌಲಗಿ

ಸಲಹಾ ಸಮಿತಿ,
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

....

ಚಂದಾ ವಿವರ :
ವಾರ್ಷಿಕ : ರೂ. ೧೦೦/–
ಅರ್ಧವಾರ್ಷಿಕ ರೂ ೫೦/–
ಬಿಡಿ ಸಂಚಿಕೆ : ರೂ. ೧೦/–

ಸಂಪರ್ಕ ವಿಳಾಸ :
ಜನಪದ ಸೇವಾ ಟ್ರಸ್ಟ್ (ರಿ.)
ಕಲ್ಯಾಣಿ ಬೀದಿ,
ಮೇಲುಕೋಟೆ
ಜಿಲ್ಲಾ : ಮಂಡ್ಯ. ೫೭೧ ೪೩೧.
ದೂರವಾಣಿ : ೦೮೨೩೬/೫೮೭೫೪

ಜನಪದ ಸಂಗತಿ.....................

ಕರ್ನಾಟಕದ ಸಾವಿರಾರು ಹಳ್ಳಿಗಳಲ್ಲಿ ಹಂಗರಹಳ್ಳಿ ಒಂದು. ಇತ್ತೀಚೆಗೆ ಅಲ್ಲಿ ಒಂದು ಭಯಾನಕ ಸಾಮಾಜಿಕ ಘಟನೆ ನಡೆದು ಅದು ಇಡೀ ದೇಶದ ಗಮನವನ್ನು ಸೆಳೆಯಿತು. ಅಲ್ಲಿಯ ಗಣಿ ಕೈಗಾರಿಕೋದ್ಯಮಿಯೊಬ್ಬ ತನ್ನ ಕೆಲಸ ದಾಳುಗಳ ಕಾಲಿಗೆ ಸರಪಣಿ ಹಾಕಿಸಿ ಅವರಿಂದ ಕಲ್ಲು ಒಡೆಸುತ್ತಿದ್ದ. ಬಹಳ ದೀರ್ಘ ಕಾಲದಿಂದ ನಡೆದು ಬಂದ ಈ ಅಮಾನುಷ ಘಟನೆ ಇತ್ತೀಚೆಗೆ ಬೆಳಕಿಗೆ ಬಂದು ಕಾನೂನು ತನ್ನ ಕಾರ್ಯ ಪ್ರಾರಂಭಿಸಿದೆ. ಈ ದುಷ್ಕೃತ್ಯಕ್ಕೆ ಕಾರಣ ರಾದವರೆಲ್ಲರನ್ನು ಬಂಧಿಸಲಾಗುತ್ತಿದೆ ಮತ್ತು ಹೊಣೆಗೇಡಿ ಅಧಿಕಾರಿಗಳ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳಲಾಗುತ್ತಿದೆ. ಇದು ಈ ಹಂತದವರೆಗೆ ಸರಿ ಯಾದ ಕ್ರಮ. ಆದರೆ ನಮ್ಮ ಮುಂದೆ ಇರುವ ಪ್ರಶ್ನೆ ಇಂಥ ಹೃದಯ ವಿದ್ರಾವಕ ಘಟನೆಗಳಿಗೆ ಕಾರಣವಾಗುವ ಮನೋವೃತ್ತಿಯನ್ನು ಮನುಷ್ಯನು ಏಕೆ ಬೆಳೆಸಿಕೊಳ್ಳುತ್ತಾನೆ ? ಅವನಿಗೆ ಸರಿ–ತಪ್ಪು, ನ್ಯಾಯ–ಅನ್ಯಾಯ ಮುಂತಾ ದವುಗಳ ವಿವೇಚನೆ ಇಲ್ಲವೆ? ಎಷ್ಟೋ ಸಲ ಇಂಥ ಘಟನೆಗಳ ಹಿಂದೆ ಶಿಕ್ಷಿ ತರೂ, ಹಣವಂತರೂ, ಅಧಿಕಾರಿಗಳೂ ಇರುತ್ತಾರೆಂಬ ಸಂಗತಿ ಮನುಷ್ಯನ ಮನೋವೃತ್ತಿಗೂ ಅವನ ಶಿಕ್ಷಣಕ್ಕೂ ಹಾಗೂ ಸಾಮಾಜಿಕ ಸ್ಥಾನಮಾನಗಳಿಗೂ ಯಾವ ಸಂಬಂಧವೂ ಇಲ್ಲವೆಂದು ತೋರಿಸುತ್ತದೆ. ಅಂದರೆ ಮಾನವೀಯ ಗುಣ ಗಳು ಹಾಗೂ ಅಮಾನವೀಯ ಗುಣಗಳು ಮನುಷ್ಯನಲ್ಲಿ ಜನ್ಮದಿಂದಲೇ ಬಂದು ಬಿಡುತ್ತವೆಂದಾಯಿತು. ಆದರೆ ಮುಂದೆ ಕ್ರಮಶಃ ಮನುಷ್ಯ ಬೆಳೆಯುವ ವಾತಾವರಣದ ಪ್ರಕಾರ ಅವನಿಗೆ ಸಂಸ್ಕಾರಗಳಾಗಲು ಪ್ರಾರಂಭಿಸುತ್ತವೆ. ಅದ ರಂತೆ ಅವನ ಸ್ವರೂಪ ರೂಪಗೊಳುತ್ತ ಹೋಗುತ್ತದೆ. ಇದು ವೈಜ್ಞಾನಿಕ ವಾಗಿಯೂ ಸಿದ್ಧಗೊಂಡಿರುವ ಸಂಗತಿ. ಆದರೂ ಕೂಡ ಇಂಥ ಘಟನೆಗಳು ನಡೆದಾಗಲೆಲ್ಲ ಅದರಲ್ಲಿಯ ಪಾತ್ರಧಾರಿಗಳ ಆರ್ಥಿಕ–ಸಾಮಾಜಿಕ ಸಂಗತಿಗಳ ವಿಶ್ಲೇಷಣೆಯ ಜೊತೆಯಲ್ಲಿಯೇ ಇಂಥ ಅಮಾನವೀಯ ಘಟನೆಗಳಿಗೆ ಕಾರಣ ರಾದವರ ಮನೋಭೂಮಿಕೆ ಹಾಗೂ ಅವರು ಬೆಳೆದುಬಂದ ವಾತಾವರಣ, ಪರಿಸರ ಇತ್ಯಾದಿಗಳ ವ್ಯವಸ್ಥಿತ ಅಧ್ಯಯನವನ್ನು ಕೈಗೊಳ್ಳುವುದು ಸಾಧ್ಯವಾಗುವುದಾದರೆ ಇಂಥ ಘಟನೆಗಳ ಪುನರಾವರ್ತನೆಯನ್ನು ತಡೆಯಲು ಸಾಧ್ಯವಾಗಬಹುದೇನೋ ಇಲ್ಲಿ ಕೇವಲ ಸರಕಾರಕ್ಕಷ್ಟೇ ಕೆಲಸವಿಲ್ಲ.

(೨೨ ನೇ ಪುಟಕ್ಕೆ ಮುಂದುವರೆದಿದೆ)

ರಾಜಕಾರಣ ಮತ್ತು ಸೇವಾ ಸಂಸ್ಥೆಗಳು

–ಸುರೇಂದ್ರ ಕೌಲಗಿ

ಸೇವಾ ಸಂಸ್ಥೆಗಳ ಮೇಲೆ ರಾಜಕಾರಣದ ಪ್ರಭಾವ ಉಂಟಾಗದೇ ಇರಲು ಸಾಧ್ಯವಿಲ್ಲ. ಇದು ಇತ್ತೀಚಿಗಂತೂ ಹೆಚ್ಚು - ಹೆಚ್ಚು ಅನುಭವಕ್ಕೆ ಬರುತ್ತಿರುವ ಮಾತು. ಆದ್ದರಿಂದಲೇ ಏನೋ ಈಗ ಹಲವಾರು ವರ್ಷಗಳಿಂದ "ಸ್ವಯಂ ಸೇವಾ ಸಂಸ್ಥೆ" ಎಂಬ ಸಾಮಾನ್ಯವಾದ ಪ್ರಚಲಿತ ಸಂಜ್ಞೆಯು ಬದಲಾಗಿ "ಸರಕಾರೇತರ ಸಂಸ್ಥೆ (ನಾನ್-ಗವರ್ನಮೆಂಟಲ್ ಆರ್ಗನೈಜೇಷನ್-ಎನ್.ಜಿ.ಓ.) ಎಂಬುದು ಬಳಕೆಗೆ ಬಂದಿದೆ. ಈ ಬದಲಾವಣೆಯನ್ನು ಯಾರು, ಯಾವಾಗ ಮತ್ತು ಯಾವ ಸಂದರ್ಭದಲ್ಲಿ ತಂದರು ಎಂಬುದು ಖಚಿತವಾಗಿ ದಾಖಲೆಗೊಂಡಿಲ್ಲವಾದರೂ ತೊಂಭತ್ತರ ದಶಕದಲ್ಲಿ ಈ ಪದಗುಚ್ಛ ಹೆಚ್ಚಾಗಿ ಬಳಕೆಗೆ ಬಂದಿದೆ.

ಸ್ವಾತಂತ್ರ್ಯಪೂರ್ವದಲ್ಲಿದ್ದ ಸ್ವಯಂ ಸೇವಾ ಸಂಸ್ಥೆಗಳ ಮೇಲೆ ಸ್ವಾತಂತ್ರ್ಯ ಆಂದೋಲನದ ರಾಜಕಾರಣದ ಪ್ರಭಾವ ಬಿದ್ದಿದ್ದರೆ ಸ್ವಾತಂತ್ರ್ಯೋತ್ತರ ಸಂಸ್ಥೆಗಳ ಮೇಲೆ ಸರ್ಕಾರದ ಧನಸಹಾಯ ಪಡೆಯುವ ರಾಜಕಾರಣದ ಪ್ರಭಾವ ಬಿದ್ದಿದೆ. ಸ್ವಯಂ ಸೇವಾ ಸಂಸ್ಥೆಗಳು ಸರಕಾರದ ಸಹಾಯಕ್ಕಾಗಿ ಅದರ ಹತ್ತಿರ ಹೋದಷ್ಟೂ ಸರಕಾರದ ಅಪ್ಪಿಗೆ ಬಿಗಿಯಾಗುತ್ತ ಹೋಗಿದೆ. ಆದ್ದರಿಂದಲೆ ೧೮೬೦ ನೇ ಇಸ್ವಿಯಲ್ಲಿ ಜಾರಿಗೆ ಬಂದು ನೂರು ವರ್ಷಗಳಿಗೂ ಹೆಚ್ಚು ಹಳೆಯದಾದ ಸಂಸ್ಥೆಗಳ ನೋಂದಣಿ ಕಾನೂನು ಯಾವ ಹೊಸ ಮಾರ್ಪಾಡುಗಳಿಲ್ಲದೆ ಅದೇ ಇಂಗ್ಲೀಷ್ ಆಡಳಿತದ ಮನೋದೃಷ್ಟಿಯಿಂದ ಇನ್ನೂ ಜಾರಿಯಲ್ಲಿದೆ. ಅಲ್ಲದೆ, ೧೯೭೩ ರಲ್ಲಿ ಜಾರಿಗೆ ಬಂದ ವಿದೇಶಿ ವಿನಿಮಯ ನಿಯಂತ್ರಣ ಕಾಯಿದೆ (ಫೇರಾ), ೧೯೬೧ ರಲ್ಲಿ ಜಾರಿಗೆ ಬಂದ ಆದಾಯ ತೆರಿಗೆ ಕಾಯಿದೆ, ವಿದೇಶಿ ಧನಸಹಾಯ ನಿಯಂತ್ರಣ ಕಾಯಿದೆ (FCRA) ಇವುಗಳ ಕಾರಣದಿಂದ ಸೇವಾ ಸಂಸ್ಥೆಗಳು ಸರ್ಕಾರದ ತೊತ್ತುಗಳಾಗಿ ಕೆಲಸ ಮಾಡುತ್ತಿವೆ.

ಇಲ್ಲಿ ಒಂದು ವಿಪರ್ಯಾಸ ಇದೆ. ೧೯೯೧ ನೇ ಇಸ್ವಿಯಿಂದ ಉದಾರೀಕರಣ ನೀತಿ, ಮುಕ್ತ ಮಾರುಕಟ್ಟೆ ಆರ್ಥಿಕ ನೀತಿ ಇವು ಜಾರಿಗೆ ಬಂದು ದೇಶದೊಳಗೆ ಸಾವಿರಾರು ಸಂಖ್ಯೆಗಳಲ್ಲಿ ಬಹುರಾಷ್ಟ್ರೀಯ ಕಂಪನಿಗಳು ಸರಕಾರದಿಂದ ಎಲ್ಲ ಬಗೆಯ ರಿಯಾಯಿತಿಗಳನ್ನು ಪಡೆದು ನುಗ್ಗುತ್ತಿರುವಾಗ ದೇಶದ ಅಭಿವೃದ್ಧಿಗಾಗಿ ಜನತೆಯ ಮಧ್ಯೆ ಇದ್ದುಕೊಂಡು ನೆಲಮಟ್ಟದಲ್ಲಿ ಕೆಲಸ ಮಾಡುತ್ತಿರುವ ಭಾರತೀಯ ಸ್ವಯಂ ಸೇವಾ ಸಂಸ್ಥೆಗಳ ಬಗ್ಗೆ ಅಧಿಕಾರಿಗಳು ಸಂಶಯದೃಷ್ಟಿ

ಯಿಂದಲೂ, ಕೀಳುಮನೋಭಾವನೆಯಿಂದಲೂ ನೋಡುವುದನ್ನು ಮಾತ್ರ ಇನ್ನೂ ಬಿಟ್ಟಿಲ್ಲ. ಅಲ್ಲದೆ, ಧನಸಹಾಯದ ನೆಪದಲ್ಲಿ ತಮ್ಮ ಆಡಳಿತ ನಿರ್ವಹಣೆಯ ಜವಾಬ್ದಾರಿಯ ಭಾರವನ್ನು ಸ್ವಯಂ ಸೇವಾ ಸಂಸ್ಥೆಗಳ ಕತ್ತಿನ ಮೇಲೆ ಹಾಕುವ ಪ್ರವೃತ್ತಿಯೂ ಸರಕಾರದಲ್ಲಿ ಕಂಡುಬರುತ್ತಿದೆ.

ಕೇಂದ್ರ ಸರ್ಕಾರದ ಉನ್ನತ ಹಂತದಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಕಡೆಗೆ ನೋಡುವ ದೃಷ್ಟಿಯಲ್ಲಿ ಕೊಂಚ ಬದಲಾವಣೆ ಆಗುತ್ತಿರುವುದು ಆಗಾಗ್ಗೆ ಕಂಡುಬಂದರೂ ಅದು ಮೇಲ್ಮಟ್ಟದಲ್ಲಿ ಮಾತ್ರ ಇದೆಯೇ ಹೊರತು ಕೆಳಗಿನ ಹಂತದಲ್ಲಿ ಇಳಿದಿಲ್ಲ. ಸರಕಾರದ ಜವಾಬ್ದಾರಿಗಳು, ಕಾರ್ಯಕ್ರಮಗಳು ಹೆಚ್ಚಿದಂತೆಲ್ಲ ಸ್ವಯಂ ಸೇವಾ ಸಂಸ್ಥೆಗಳ ಕಡೆಗೆ ನೋಡುವ ಅನಿವಾರ್ಯತೆ ಉಂಟಾಗುತ್ತಿರುವುದೂ ನಿಜ. ಆದರೆ ಸರ್ಕಾರ ಸ್ವಯಂ ಸೇವಾ ಸಂಸ್ಥೆಗಳಿಗೆ ಯಾವ ಪ್ರಕಾರದ ಗೌರವ ಹಾಗೂ ಭಾಗವಹಿಸುವಿಕೆಯ ಬಗ್ಗೆ ಅವಕಾಶಗಳನ್ನು ಕೊಡಬೇಕೋ ಆ ಪ್ರಕಾರವಾಗಿ ಅವುಗಳನ್ನು ಕೊಡುತ್ತಿಲ್ಲ. ಇದ್ದರಿಂದಲೇ ೧೯೮೪ ರಲ್ಲಿ ಕೇಂದ್ರ ಯೋಜನಾ ಆಯೋಗವು ಆಯ್ಕೆಗೊಂಡ ೧೦೦ ಸ್ವಯಂ ಸೇವಾ ಸಂಸ್ಥೆಗಳ ಎರಡು ದಿನಗಳ ಕಾರ್ಯಾಗಾರ ನಡೆಸಿತು. ಈ ಕಾರ್ಯಾಗಾರದ ಕೊನೆಯಲ್ಲಿ "ಸ್ವಯಂ ಸೇವಾ ಸಂಸ್ಥೆ ಮತ್ತು ಸರ್ಕಾರದ ಮಧ್ಯೆ ಸಹಕಾರಾತ್ಮಕ ಸಂಬಂಧವೇರ್ಪಡಿಸಲು ಕಾರ್ಯಯೋಜನೆ" ಎಂಬ ಪ್ರಣಾಳಿಕೆಯನ್ನು ಸಿದ್ಧಪಡಿಸಲಾಯಿತು. ಆದರೆ ಆ ಪ್ರಣಾಳಿಕೆಯಲ್ಲಿ ಕಾಣಿಸಲಾದ ಮಾರ್ಗದರ್ಶಿ ಸೂತ್ರಗಳನ್ನು ಒಮ್ಮೆಯಾದರೂ ಸರಕಾರ ಅನುಸರಿಸಿದ ಉದಾಹರಣೆಯಿಲ್ಲ. ಈ ಪ್ರಣಾಳಿಕೆಯನ್ನು ಯೋಜನಾ ಆಯೋಗ ಶೀತಾಗಾರದಲ್ಲಿ ಹಾಕಿದಂತೆ ತೋರುತ್ತದೆ.

ಸ್ವಯಂ ಸೇವಾ ಸಂಸ್ಥೆಗಳನ್ನು ಕುರಿತು ಇರುವ ಸರಕಾರಗಳ ಉದಾಸಿನ ದೃಷ್ಟಿಯ ಬಗ್ಗೆ ಕರ್ನಾಟಕ ಸರ್ಕಾರದ ಉದಾಹರಣೆಗಳನ್ನು ತೆಗೆದುಕೊಳ್ಳಬಹುದು. ರಾಜ್ಯದ ಅಭಿವೃದ್ಧಿಯಲ್ಲಿ ಸ್ವಯಂ ಸೇವಾ ಸಂಸ್ಥೆಗಳನ್ನು ಹೆಚ್ಚು-ಹೆಚ್ಚಾಗಿ ತೊಡಗಿಸಬೇಕು ಹಾಗೂ ಈ ಎರಡೂ ವಿಭಾಗಗಳಲ್ಲಿ ಹೊಂದಾಣಿಕೆಯನ್ನು ಉತ್ತಮವಾಗಿ ಮಾಡಬೇಕು ಎಂಬ ಉದ್ದೇಶ್ಯದಿಂದ ಕರ್ನಾಟಕ ಸರ್ಕಾರವು ಈಗ್ಗೆ ಸುಮಾರು ಹತ್ತು-ಹದಿನೈದು ವರ್ಷಗಳ ಹಿಂದೆ ಫೆರ್ವಾರ್ಡ್- ಕರ್ನಾಟಕ ಸಂಸ್ಥೆಯ ಪ್ರಯತ್ನದಿಂದ ರಾಜ್ಯ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ಸಲಹಾ ಸಮಿತಿಯನ್ನು ರಚಿಸಿತು. ಆ ಸಮಿತಿಯ ಕಾರ್ಯ ನಿರ್ವಹಣೆ ತೃಪ್ತಿಕರವಾಗಿ ನಡೆದಿದೆ ಎಂದೆನಿಸುವುದಿಲ್ಲ. ಏಕೆಂದರೆ ಈ ಸಮಿತಿಯು ಪೂರ್ಣವಾಗಿ ಅಧಿಕಾರಿಗಳ ಅನುಕೂಲಕ್ಕೆ ತಕ್ಕಂತೆ ಕೆಲಸ ಮಾಡುತ್ತದೆ.

ಇನ್ನೊಂದು ಉದಾಹರಣೆ ಕರ್ನಾಟಕ ರಾಜ್ಯ ಸಮಾಜ ಕಲ್ಯಾಣ ಸಲಹಾ ಮಂಡಳಿ. ಇದು ಮಹಿಳೆ ಮತ್ತು ಮಕ್ಕಳ ಕಲ್ಯಾಣಕ್ಕಾಗಿ ಕೆಲಸ ಮಾಡುವ ಸ್ವಯಂ ಸೇವಾ ಸಂಸ್ಥೆಗಳಿಗೆ ಧನಸಹಾಯ ಮಾಡುತ್ತದೆ. ಇದರ ಅಧ್ಯಕ್ಷರನ್ನು ರಾಜ್ಯ ಸರ್ಕಾರ ನಿಯುಕ್ತಿ ಮಾಡುತ್ತದೆ. ಈ ನಿಯುಕ್ತಿಯು ಪೂರ್ಣವಾಗಿ ರಾಜಕೀಯ ನಿಯುಕ್ತಿ ಆಗಿರುವುದರಿಂದ ಎಷ್ಟು ಪರಿಣಾಮಕಾರಿಯಾಗಿ ಈ ಮಂಡಳಿ ಕೆಲಸ ಮಾಡಬೇಕೋ ಅಷ್ಟು ಪರಿಣಾಮಕಾರಿಯಾಗಿ ಕೆಲಸ ಮಾಡಲು ಸಾಧ್ಯವಾಗಿಲ್ಲ.

ಇದೇ ರೀತಿ ಕರ್ನಾಟಕ ರಾಜ್ಯ ಖಾದಿ ಗ್ರಾಮೋದ್ಯೋಗ ಮಂಡಳಿಯ ವಿಷಯ. ಖಾದಿ ಗ್ರಾಮೋದ್ಯೋಗ ಕ್ಷೇತ್ರದಲ್ಲಿ ಕರ್ನಾಟಕದಲ್ಲಿ ನೂರಾರು ಸ್ವಯಂ ಸೇವಾ ಸಂಸ್ಥೆಗಳು ಸ್ವಾತಂತ್ರ್ಯ ಬರುವ ಮೊದಲಿನಿಂದಲೂ ಕೆಲಸ ಮಾಡುತ್ತಿವೆ ಮತ್ತು ಸ್ವಾತಂತ್ರ್ಯ ಬಂದ ಮೇಲೆ ಇವುಗಳ ಸಂಖ್ಯೆ ದ್ವಿಗುಣ ಗೊಂಡಿದೆ. ಈ ಕ್ಷೇತ್ರದಲ್ಲಿ ಜೀವನ ನಡೆಸುವವರ ಸಂಖ್ಯೆ ಲಕ್ಷಾಂತರ. ಆದರೆ ಈ ಮಂಡಳಿ ಸ್ಥಾಪನೆಯಾದಾಗಿನಿಂದಲೂ ರಾಜಕೀಯ ಏರುಪೇರು ಗಳಿಗೆ ತುತ್ತಾಗುತ್ತಾ ಬಂದಿದೆ. ಈಗ ಏಪ್ರಿಲ್ ಒಂದರಿಂದ ಖಾದಿ ಬಟ್ಟೆಯ ಮೇಲಿನ ರಿಬೆಟ್ ತೆಗೆದುಹಾಕಿದೆ. ಹೊಸ ಬೇರೆ ವ್ಯವಸ್ಥೆ ಮಾಡದಿರುವುದರಿಂದ ಖಾದಿ ಮಂಡಳಿ ನಿಃಸಹಾಯಕವಾಗಿ ನೋಡುತ್ತ ಕುಳಿತಕೊಂಡಿದೆ. ಇದಕ್ಕೆ ಕಾರಣ ಖಾದಿ ಉದ್ಯಮದಲ್ಲಿ ರಾಜಕಾರಣ ಸೇರಿರುವುದು.

ಕೇಂದ್ರ ಸರ್ಕಾರದ ಆಶ್ರಯದಲ್ಲಿ ಸ್ವಯಂ ಸೇವಾ ಸಂಸ್ಥೆ ಎಂದು ನೋಂದಣಿಗೊಂಡಿರುವ ಸ್ವತಃ ಕಪಾರ್ಟ್ ಸಂಸ್ಥೆ ಒಂದು ಸರ್ಕಾರಿ ಇಲಾಖೆ ಯಂತಾಗಿದೆ.

ಆದ್ದರಿಂದ ಈಗ ಸ್ವಯಂ ಸೇವಾ ಸಂಸ್ಥೆಗಳು ಯೋಚನೆ ಮಾಡುವ ಕಾಲ ಬಂದಿದೆ. ಸರ್ಕಾರದ ಹಾಗೂ ವಿದೇಶಿ ಧನಸಹಾಯ ಪಡೆಯುತ್ತ, ಅವುಗಳ ಚಕ್ರದ ಹಲ್ಲುಗಳಾಗಿ ತಿರುಗುತ್ತಿರಬೇಕೇ ಅಥವಾ ತಮ್ಮ ವಿಚಾರ ಮತ್ತು ಸಾಮರ್ಥ್ಯದ ಬಲದಿಂದ ಎಷ್ಟೇ ಕಡಿಮೆ ಪ್ರಮಾಣದಲ್ಲಿಯಾಗಲಿ ಸಮಾಜ ಅಭಿವೃದ್ಧಿಯ ಕೆಲಸವನ್ನು ಮುನ್ನಡೆಸಿಕೊಂಡು ಹೋಗಬೇಕೆ?

ಮಹಾತ್ಮಾ ಗಾಂಧೀಜಿಯವರು ಸ್ವಾತಂತ್ರ್ಯ ಆಂದೋಲನದ ಅಂಗ ವಾಗಿ ೨೨ ರಚನಾತ್ಮಕ ಕಾರ್ಯಗಳನ್ನು ನಡೆಸಿಕೊಂಡು ಬಂದರು. ಇಂದೂ ಆ ಕಾರ್ಯಗಳೇ ಬೇರೆ ಬೇರೆ ಹೆಸರುಗಳಲ್ಲಿ, ಬೇರೆ ಬೇರೆ ರೀತಿಯಲ್ಲಿ ನಡೆಯುತ್ತಿವೆ. ಆಗ ಅವು ಜನಾಧಾರಿತ ಕಾರ್ಯ

೧೧ ನೇ ಪುಟ ನೋಡಿ

ವೈಚಾರಿಕ ಧಾರಾವಾಹಿ.....................

ಒಂದಾಗಬೇಕೆ, ಹಾಳಾಗಬೇಕೆ?

– ದಾದಾ ಧರ್ಮಾಧಿಕಾರಿ

(ದಾದಾ ಧರ್ಮಾಧಿಕಾರಿ ಭಾರತದ ಶ್ರೇಷ್ಠ ಚಿಂತಕರಲ್ಲಿ ಒಬ್ಬರಾಗಿದ್ದರು. ಜೀವನವನ್ನು ವಸ್ತುನಿಷ್ಠೆಯ ದೃಷ್ಟಿಯಿಂದ ನೋಡಿದರು. ಅವರ ಶತಮಾನೋತ್ಸವದ ಸಂದರ್ಭವನ್ನು ಉಪಯೋಗಿಸಿಕೊಂಡು ಓದುಗರಿಗೆ ಅವರ ವಿಚಾರಪೂರ್ಣ ಅನುಭವದ ಮಾತುಗಳನ್ನು ಇಲ್ಲಿ ಕ್ರಮಶಃ ಕೊಡಲಾಗುತ್ತಿದೆ. ಇದು ಮೂರನೇಯ ಸರಣಿ. –ಸಂ)

ಮನುಷ್ಯನ ಮೂಲಭೂತ ವಿಚಾರವನ್ನು ಪ್ರಾರಂಭಿಸಿದ್ದೇವೆ. ವಿಜ್ಞಾನ ಈಗ ನಮ್ಮನ್ನು ಮೂಲಭೂತ ವಿಚಾರಗಳ ಕಡೆಗೆ ಎಳೆದೊಯ್ಯುತ್ತಿದೆ. ವಿಜ್ಞಾನ ಸಾಧಾರಣ ಮನುಷ್ಯನ ಪರಸ್ಪರ ಸಂಬಂಧದಲ್ಲೂ ಆಮೂಲಾಗ್ರ ಪರಿವರ್ತನೆಯನ್ನು ತಂದಿದೆ. ನಮ್ಮ ಜೀವನದಲ್ಲಿ ವಿಜ್ಞಾನ ತಂದಿಟ್ಟ ಪರಿವರ್ತನೆ ಮತ್ತು ಮಾಡಿದ ಕ್ರಾಂತಿಗಳ ಪರಿಣಾಮವಾಗಿ ನಮ್ಮ ಜೀವನದ ಮೂಲಭೂತ ಸಮಸ್ಯೆಗಳ ಬಗ್ಗೆ ವಿಚಾರ ಮಾಡಬೇಕಾದುದು ಅನಿವಾರ್ಯವಾಗಿದೆ. ಅಧ್ಯಾತ್ಮ ಅಂದರೆ ಮನುಷ್ಯನ ಆತ್ಮವಿಚಾರ, ಮನುಷ್ಯನ ವಿಭೂತಿಯ ವಿಚಾರ, ಅವನ ವ್ಯಕ್ತಿತ್ವದ ವಿಚಾರ. ವಿಜ್ಞಾನ ನಮ್ಮನ್ನು ವೇದಾಂತದವರೆಗೆ ಮುಟ್ಟಿಸದೆ ಇರಬಹುದು; ಆದರೆ ವಿಜ್ಞಾನ ನಮ್ಮನ್ನು ಎಲ್ಲಿಗೆ ತಂದು ಮುಟ್ಟಿಸಿದೆಯೋ ಅಲ್ಲಿ ವೇದಾಂತದ ಅಥವಾ ಮನುಷ್ಯ ಜೀವನದ ವಿಚಾರಮಾಡದೆ ಇರಲು ಸಾಧ್ಯವಿಲ್ಲ.

ಮೊಟ್ಟಮೊದಲು ಮೂಲಭೂತ ಸಮಸ್ಯೆ ಏನು ಎಂಬುದನ್ನು ನಾವು ಅರಿತುಕೊಳ್ಳಬೇಕು. ಅರಿತುಕೊಳ್ಳದಿದ್ದರೆ ಉಳಿದ ಸಮಸ್ಯೆಗಳ ಬಗ್ಗೆ ನಮಗೆ ಯಾವ ದಷ್ಟಿಯೂ ಕೈಗೂಡದು. ಜೀವನದ ಈ ದೃಷ್ಟಿ ಮಾನವೀಯ ದೃಷ್ಟಿ. ಹಳೆಯ ಮಾನವಧರ್ಮ ಒಂದು ಇತ್ತು. ಈಗ ಹೊಸ ಮಾನವೀಯತೆ ಒಂದು ಬಂದಿದೆ. ಹೊಸ ಮಾನವೀಯತಾವಾದಿಗಳು ಕ್ರಾಂತಿಕಾರಿಗಳು. ಮಾನವೇಂದ್ರನಾಥರಾಯರ ಗುಂಪಿನವರು. ಆದರೆ ನಾನು ಮಂಡಿಸುತ್ತಿರುವುದು ಮಾನವ್ಯವಾದವಲ್ಲ. ಮಾನವ್ಯವಾದ ಒಂದು ಬೇರೆಯೇ ಸಿದ್ಧಾಂತ. ಮಾನವೀಯ ಸಿದ್ಧಾಂತ ಮತ್ತು ಜೀವನದ ವಿಚಾರ ಬೇರೆ. ಇದನ್ನು ವಾದವನ್ನಾಗಿ ಮಾಡಿ ಒಂದು ವಿಚಾರ ಪ್ರಣಾಲಿಯಲ್ಲಿ ಕ್ರೋಢೀಕರಿಸುವ ಪ್ರಯತ್ನ ಮಾಡಬಯಸುವುದಿಲ್ಲ. ಇದನ್ನು ಒಂದು ವಿಚಾರಪ್ರಣಾಲಿಯಲ್ಲಿ ಸೇರಿಸಿ ಒಂದು ವಾದದಲ್ಲಿ ಸ್ಥಿರಗೊಳಿಸಿದರೆ ಮಾನವತೆಯ ನಾಶವಾದೀತು.

ನಮ್ಮ ಮುಂದಿರುವ ಸಮಸ್ಯೆ ಇದು : ಮನುಷ್ಯರ ಪರಸ್ಪರ ವ್ಯವಹಾರ

ದಲ್ಲಿ ಎಷ್ಟು ನಿಕಟತೆ ಇದೆಯೋ ಅಷ್ಟು ಸೌಹಾರ್ದತೆ ಏಕಿಲ್ಲ? ಮನುಷ್ಯರು ನಿಕಟತೆ ಹೆಚ್ಚುತ್ತಿದೆ; ಒಬ್ಬರಿಗೊಬ್ಬರು ಹತ್ತಿರ ಆಗುತ್ತಿದ್ದಾರೆ; ಜಗತ್ತು ಚಿಕ್ಕ ದಾಗುತ್ತಿದೆ; ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋಗುವುದು ಬಹಳ ಸುಲಭವಾಗಿದೆ; ಸಮಾಚಾರವಂತೂ ಈಗ ಒಂದು ಕಡೆಯಿಂದ ಇನ್ನೊಂದು ಕಡೆಗೆ ಎಷ್ಟು ಬೇಗ ಮುಟ್ಟುತ್ತಿದೆ! ಶಬ್ದವೇಗವನ್ನೂ ಪ್ರಕಾಶವೇಗವನ್ನೂ ಮೀರಿಸಿವೆ ನಮ್ಮ ಅಸ್ತ್ರಗಳು. 'ಮನೋಜವಂ ಮಾರುತತುಲ್ಯ ವೇಗಂ' ಎಂದು ಹನುಮಂತನನ್ನು ವರ್ಣಿಸುತ್ತದೆ ಸ್ತೋತ್ರ. ಮನಸ್ಸಿನಷ್ಟು ವೇಗ ಇದ್ದವನು ವಾಯುವಿಗೆ ಸಮಾನ. ಈಗ ಎಷ್ಟೋ ಆಯುಧಗಳು ವಾಯು ವೇಗವನ್ನೂ ಮೀರಿಸಿವೆ. ಮನೋವೇಗದಿಂದ ನಡೆಯುತ್ತಿದೆ ನಮ್ಮ ಪ್ರವಾಸ, ನಮ್ಮ ಸುದ್ದಿ-ಸಮಾಚಾರಗಳ ಯಾತ್ರೆ. ಹೀಗೆ ಮನುಷ್ಯರಲ್ಲಿ ಸಾನ್ನಿಧ್ಯ, ಸನಿ ಕರ್ಷ, ನಿಕಟತೆ ಬಹಳ ಹೆಚ್ಚಾಗಿದೆ. ಇಷ್ಟಾದರೂ ಸೌಹಾರ್ದವೇಕೆ ಹೆಚ್ಚ ಲಿಲ್ಲ? ಇದು ಪ್ರಶ್ನೆ. ನಮ್ಮ ಮನೆಯಲ್ಲಿ ಬೆಳಕೂ ಹೆಚ್ಚುತ್ತಿದೆ, ಕತ್ತಲೆಯೂ ಹೆಚ್ಚುತ್ತಿದೆ ಎಂದು ಯಾರಾದರೂ ಅಂದರೆ ನೀವು ಏನೆಂದೀರಿ? ನಿನ್ನೆಯವರೆಗೆ ನಮ್ಮ ಮನೆಯ ಒಂದೊಂದು ಕೋಣೆಯಲ್ಲಿ ಒಂದೊಂದು ಬಲ್ಬು ಇತ್ತು. ಈಗ ಅದರ ಜೊತೆಗೆ ಒಂದು ಟ್ಯೂಬ್ ಲೈಟನ್ನೂ ಹಾಕಿದೇವೆ. ಇದರ ಫಲವಾಗಿ ಕತ್ತಲೆ ಹೆಚ್ಚಿತು! ಮನುಷ್ಯರಲ್ಲಿ ನಿಕಟತೆ ಹೆಚ್ಚಾಯಿತು, ಕೋರ್ಟು ಕಛೇರಿಗಳೂ ಹೆಚ್ಚಾದವು. ಮನುಷ್ಯರಲ್ಲಿ ಸಂಪರ್ಕ ಹೆಚ್ಚಾಯಿತು, ಅವಿಶ್ವಾಸವೂ ಹೆಚ್ಚಾಯಿತು. ಏನು ಕಾರಣ? ಅದನ್ನೇ ಹುಡುಕಬೇಕಾಗಿದೆ.

ಇದುವರೆಗೆ ಇದಕ್ಕೆ ಉತ್ತರವನ್ನು ಕೊಡಲು ವಿಜ್ಞಾನಕ್ಕೆ ಸಾಧ್ಯವಾಗಿಲ್ಲ. ಇದಕ್ಕೆ ಉತ್ತರ ಕೊಡುವುದು ವಿಜ್ಞಾನಕ್ಕೆ ಸಾಧ್ಯ ಎಂದು ನಾವು ತಿಳಿದಿದೇವೆ. ಆದರೆ ಆಗಿಲ್ಲ. ಹಾಗಾದರೆ ಇದಕ್ಕೆ ಉತ್ತರ ಯಾರು ಕೊಡಬೇಕು? ಮನುಷ್ಯನೇ ಕೊಡಬೇಕು. ಈ ಅರ್ಥದಲ್ಲಿ, ಇಷ್ಟು ಅಂಶದಲ್ಲಿ ವಿಜ್ಞಾನಕ್ಕಿಂತ ಮನುಷ್ಯ ಹೆಚ್ಚು. ಮನುಷ್ಯನಿಗಿಂತ ವಿಜ್ಞಾನ ಹೆಚ್ಚಿನದಾದರೆ ವಿಜ್ಞಾನ ಮನುಷ್ಯನನ್ನು ನಡೆಸೀತು, ಮನುಷ್ಯ ವಿಜ್ಞಾನವನ್ನು ನಡೆಸಲಾರ. ವಿಜ್ಞಾನದ ನಿಯಂತ್ರಣ ವನ್ನು ಮನುಷ್ಯ ಮಾಡಿಯಾನೇ ಅಥವಾ ಮನುಷ್ಯನ ನಿಯಂತ್ರಣವನು ವಿಜ್ಞಾನ ಮಾಡೀತೋ? ಇದಕ್ಕೆ ಉತ್ತರವನ್ನು ಕೊಡಬೇಕಾದವರು ನೀವು - ನಾನು, ಸಾಧಾರಣ ಮನುಷ್ಯರು. ಒಬ್ಬ ವಿಶೇಷ ಮನುಷ್ಯ ಯಾರೂ ಇದಕ್ಕೆ ಉತ್ತರ ಕೊಡಲಾರ. ಇತರ ಮನುಷ್ಯರ ಜೊತೆಯಲ್ಲಿ ಇರಬಯಸುವ ಸಾಧಾರಣ ಮನುಷ್ಯನೇ ಕೊಡಬೇಕು. ವಿಜ್ಞಾನ ನಮ್ಮನ್ನು ಒಂದು ಘಟ್ಟಕ್ಕೆ ತಂದಿಟ್ಟಿದೆ, ಈ ಜಗತ್ತು ಒಂದಾದರೂ ಆಗಬೇಕು, ಹಾಳಾದರೂ ಆಗಬೇಕು ಎನ್ನುತ್ತಿದೆ ಈಗ. ವೆಂಡೆಲ್ ವಿಲ್ಕೀ ಮೊಟ್ಟಮೊದಲು ಪುಸ್ತಕವನ್ನು ಬರೆದಾಗ

ಲೋಕದ ಮನುಷ್ಯನನ್ನು ಅದು ಸೆಳೆಯಿತು. ಆ ಪುಸ್ತಕದ ಕೊನೆಯ ವಾಕ್ಯವೇನು? ಈಗ ಜಗತ್ತು 'ಒನ್ ವರ್ಲ್ಡ್' ಆದರೂ ಆಗಬೇಕು ಇಲ್ಲವೆ 'ನೋ ವರ್ಲ್ಡ್' ಆದರೂ ಆಗಬೇಕು. ಜಗತ್ತು ಒಂದಾಗಬೇಕು ಇಲ್ಲವೆ ನಶಿಸಿ ಹೋಗಬೇಕು. ವಿಜ್ಞಾನ ಈ ಪ್ರಶ್ನೆಯನ್ನು ನಮ್ಮ ಮುಂದೆ ತಂದಿಟ್ಟಿದೆ. ನಾವು ಇವೆರಡರಲ್ಲಿ ಯಾವುದನ್ನು ಆರಿಸೋಣ? ಇದೇ ಈಗಿನ ಶೋಧನೆ. ಈ ಸಮಸ್ಯೆಗೆ ಉತ್ತರವನ್ನು ವಿಜ್ಞಾನ ಕೊಡಲಾರದು.

ಉಪಕ್ರಮದ ಭಾಷಣದಲ್ಲೇ ಈ ವಿರೋಧವನ್ನು ನಿಮ್ಮ ಮುಂದೆ ಇಟ್ಟೆ. ಈಗ ಅದನ್ನು ಪೃಥಕ್ಕರಿಸುತ್ತಿದೇನೆ. ಈ ವಿರೋಧ ಮನುಷ್ಯನಲ್ಲಿ ಎಲ್ಲಿ ಬಂತು, ಏಕೆ ಬಂತು? ದೀಪ ಹೆಚ್ಚಾಯಿತು, ಆದರೆ, ಬೆಳಕು ಕಡಮೆಯಾಯಿತು ಎಂದರೆ ದೀಪ ಅಥವಾ ಬಲ್ಬು ಬೆಳಕನ್ನು ಹೆಚ್ಚು ಮಾಡುವಂಥದಲ್ಲ, ಕತ್ತಲೆಯನ್ನು ಹೆಚ್ಚು ಮಾಡುವಂಥದು. ಈ ದೋಷ ದೀಪದ್ದು. ಇದುವರೆಗೂ ಮನುಷ್ಯನ ಇಡೀ ಸ್ನೇಹವನ್ನು ಮಾನವನು ಅರಿಯಲಿಲ್ಲ; ಮನುಷ್ಯನಲ್ಲಿ ಸ್ನೇಹದ ಬಯಕೆ ಇಲ್ಲವೇನು? ಇದೆ, ಸ್ನೇಹದ ಬಯಕೆ ಸ್ವಾಭಾವಿಕ. ಇದನ್ನು ಗಳಿಸಬೇಕಾದ್ದಿಲ್ಲ, ಉಪಾರ್ಜನೆ ಮಾಡಬೇಕಾದ್ದಿಲ್ಲ. ಒಬ್ಬ ಭಾರಿ ದುಷ್ಟ. ಅವನು ಯಾರನ್ನೂ ಒಳ್ಳೆಯವನೆಂದು ಅನ್ನುವವನಲ್ಲ. ಅವನನ್ನು ಒಳ್ಳೆಯವನೆಂದೂ ಅನ್ನುವವರು ಯಾರೂ ಇಲ್ಲ. ಊರೇ ಅವನಿಗೆ ವಿರುದ್ಧ. ಈ ದುಷ್ಟ ಸತ್ತರೆ ಸತ್ಯನಾರಾಯಣ ಕಥೆ ಮಾಡಿಸುತ್ತೇವೆ ಎಂಬುದಾಗಿ ಊರಿನ ಸಜ್ಜನರೆಲ್ಲರೂ ದೇವರಿಗೆ ಹರಕೆ ಹೊತ್ತಿದಾರೆ. ಇಂಥ ದುಷ್ಟ ಒಂದು ದಿನ ನಿಮ್ಮ ಮನೆಗೆ ಬಂದು ಊರಿನೆಲ್ಲೆಲ್ಲಾ ನೀವು ಒಬ್ಬರೇ ದೊಡ್ಡ ಮನುಷ್ಯರು ಎಂದು ಹೇಳಿ ಹೊರಟು ಹೋಗುತ್ತಾನೆ. ಆಗ ನಿಮ್ಮ ಹೃದಯದಲ್ಲಿ ಎಂಥ ಭಾವನೆ ಹುಟ್ಟುತ್ತದೆ? ನಿಮ್ಮ ಹೃದಯವನ್ನು ಆಂದೋಲನದಲ್ಲಿ ಮುಳುಗಿಸುತ್ತದೆ. ಹೆಂಡತಿಗೆ ಹೇಳುತ್ತೀರಿ – ಇವನು ಮಹಾ ದುಷ್ಟ. ಆದರೂ ನನ್ನನ್ನು ಒಳ್ಳೆಯವನು ಎನ್ನುತ್ತಾನೆ. ದುಷ್ಟಾತಿದುಷ್ಟನ ಸದ್ಭಾವವೂ ನಮಗೆ ಹಿತ ಎನಿಸುತ್ತದೆ. ಇದು ಮುಖಸ್ತುತಿಯಲ್ಲ. ಮುಖಸ್ತುತಿ ಮಾಡಿ ಆಗಬೇಕಾದ್ದೇನು ಅವನಿಗೆ? ಇಂಥ ಕನಿಷ್ಠನ ಸ್ನೇಹವೂ ನಮಗೆ ಉಪಾದೇಯ. ಇದನ್ನು ನಾವು ಪಡೆಯಬೇಕು, ಕಾಪಾಡಿಕೊಳ್ಳಬೇಕು.

ಇದನ್ನು ವಿಜ್ಞಾನ ಕಲಿಸಲಾರದು. ಇದನ್ನು ಕಲಿಸಲು ಶಿಕ್ಷಣ ಬೇಕು. ಏನು ಅದರ ಕೆಲಸ? ಮನುಷ್ಯನ ಒಳಗಡೆ ಮಲಗಿರುವ ಭಾವನೆಯನ್ನು ಎಚ್ಚರಗೊಳಿಸುವುದು. ಹೊಸ ಭಾವನೆಯನ್ನು ಅದು ಹುಟ್ಟಿಸಲಾರದು. ಅಪೂರ್ವ ನಿರ್ಮಿತಿಯ ಶಕ್ತಿ ಮನುಷ್ಯನಲ್ಲಿ ಇಲ್ಲ. ಬಹುಶಃ ಈಶ್ವರನಲ್ಲೂ

ಇಲ್ಲ. ಒಳಗೆ ಅಡಗಿರುವ ಶಕ್ತಿಯನ್ನು ಪ್ರಕಟಗೊಳಿಸುವುದಕ್ಕೆ ಶಿಕ್ಷಣ ಎನ್ನುತ್ತಾರೆ. ಶಿಕ್ಷಣ ಎಂದರೇನೇ ಹೊರಗೆಳೆಯುವುದು. ಹೀಗೆ ಪ್ರಕಟಗೊಳಿಸುವುದಕ್ಕೆ ಎರಡು ಮಾತು ಆಗಬೇಕು. ಒಂದು, ಇದಕ್ಕೆ ಶಿಕ್ಷಣ ಅನುಕೂಲ ಆಗಬೇಕು: ಎರಡು, ಸಾಮಾಜಿಕ ಪರಿಸ್ಥಿತಿಯೂ ಇದಕ್ಕೆ ಅನುಕೂಲವಾಗಬೇಕು. ಇವೆರಡೂ ಮನುಷ್ಯನ ಸ್ನೇಹಭಾವನೆಯನ್ನು ಎಚ್ಚರಗೊಳಿಸಲು ಅವಕಾಶ ನೀಡಬೇಕು, ಪ್ರೇರಣೆಯನ್ನು ನೀಡಬೇಕು. ಬರೀ ಅವಕಾಶ ಅಲ್ಲ. ಪ್ರೋತ್ಸಾಹ, ಪ್ರೇರಣೆ, ಸ್ಫೂರ್ತಿ ಸಿಗಬೇಕು.

ದುಷ್ಟ ಮನುಷ್ಯ ನಿಮ್ಮನ್ನು ಗೌರವಿಸಿದಾಗ ನಿಮ್ಮ ಒಳಗಣ್ಣು ತೆರೆಯುತ್ತದೆ. ಶತ್ರುವೂ ನಿಮ್ಮನ್ನು ಹೊಗಳಿದರೆ ನೀವು ಪ್ರಸನ್ನರಾಗುತ್ತೀರಿ, ಹೀಗೆ ಎಂಥ ನಿಕೃಷ್ಟನೇ ಆಗಲಿ ಮನುಷ್ಯ - ಮನುಷ್ಯರಲ್ಲಿ ಸ್ನೇಹ ಎಂಬುದು ಉಪಾದೇಯ. ಈ ಸಿದ್ಧಾಂತ ಸರ್ವೋದಯದ, ಸತ್ಯಾಗ್ರಹದ ಮೂಲಭೂತ ಸಿದ್ಧಾಂತ. ಯಾರ ಸ್ನೇಹ ಬೇಡವೇ ಬೇಡವೋ ಅಂಥ ಅಧಮ ಮನುಷ್ಯ ಯಾರೂ ಜಗತ್ತಿನಲ್ಲಿಲ್ಲ. ಹೊಗಳಿಕೆ - ತೆಗಳಿಕೆಗಳ ಪರಿವೆ ನಮಗಿಲ್ಲ ಎನ್ನುತ್ತಾರೆ ಕೆಲವರು. ನಿಂದೆ - ಸ್ತುತಿಗಳ ಚಿಂತೆ ಇಲ್ಲದಿರುವುದು ಒಂದು ಗುಣವೇ. ಎಷ್ಟು ಮಟ್ಟಿಗೆ ಅದರಲ್ಲಿ ಇದೆ ಗುಣ? ಒಬ್ಬ ತೆಗಳಿದರೂ ಸರಿಯಾದ ದಾರಿಯನ್ನು ನೀವು ಬಿಡಲಿಲ್ಲ, ಹೊಗಳಿದರೂ ಸರಿಯಾದ ದಾರಿ ಬಿಡಲಿಲ್ಲ. ನಿಂದೆ – ಸ್ತುತಿಗಳ ಬಗ್ಗೆ ಹೀಗೆ ತಟಸ್ಥರಾಗಿದ್ದರೆ ಅದೇ ಗುಣ. ಇಷ್ಟಕ್ಕಿಂತ ಹೆಚ್ಚಿನ ಗುಣ ಅದರಲಿಲ್ಲ. ಯಾರಾದರೂ ತೆಗಳಿದರೆ ಏಕೆ ತೆಗಳುತ್ತಾರೆ ಎಂದು ಯೋಚಿಸಬೇಕು. ಇದರಲ್ಲಿ ನಮ್ಮ ಮನುಷ್ಯತ್ವದ ಪ್ರತಿಷ್ಠೆ ಇದೆ. ಯಾರೇ ತೆಗಳಲಿ ನನಗೆ ಪರಿವೆಯಿಲ್ಲ ಎಂದರೆ ಮನುಷ್ಯತ್ವಕ್ಕೆ ಗೌರವ ಕೊಡುವುದಿಲ್ಲ ಎಂದು ನಿಮ್ಮ ಅಭಿಪ್ರಾಯವೆ? ಒಬ್ಬ ಮನುಷ್ಯ ನಿಮ್ಮ ಬಗ್ಗೆ ಒಂದು ಅಭಿಪ್ರಾಯ ಕೊಟ್ಟರೆ ನೀವು ಅದನ್ನು ಉಪೇಕ್ಷಿಸುವುದು ಮನುಷ್ಯತ್ವವನ್ನೇ ಉಪೇಕ್ಷಿಸಿದಂತೆ. ಇವನ ಅಭಿಪ್ರಾಯ ಹೀಗೇಕೆ ಎಂದು ತಿಳಿಯುವ ಪ್ರಯತ್ನ ಮಾಡಬೇಕು. ಅದು ನಮ್ರತೆ. ನಮ್ರತೆ ಅಥವಾ ವಿನಯಶೀಲತೆ ಅಂದರೆ ತಟಸ್ಥತೆ. ವಿನಯಶೀಲತೆ ಬರುವುದೇ ತಾಟಸ್ಥ್ಯದಿಂದ. ಒಬ್ಬ ಮನುಷ್ಯ ನಿಮ್ಮನ್ನು ಹೊಗಳಿದ. ಅದಕ್ಕೆ ಬೆಲೆಯೇ ಇಲ್ಲವೆ? ನಮಗೆ ಅದರಿಂದೇನೂ ಪ್ರಯೋಜನವಿಲ್ಲ ಎನ್ನುತ್ತೀರಾ? "ನಾನೇನು ಶೂನ್ಯವಸ್ತುವೆ. ನನಗೆ ಬೆಲೆಯೇ ಇಲ್ಲವೆ" ಎಂದಾನು ಅವನು. ಒಳ್ಳೆಯ ಅಭಿಪ್ರಾಯವಾಗಲೀ, ಕೆಟ್ಟ ಅಭಿಪ್ರಾಯವಾಗಲೀ ಅದಕ್ಕೆ ಬೆಲೆ ಇದ್ದೇ ಇದೆ. ನೀವು ನಿಮ್ಮ ಸನ್ಮಾರ್ಗವನ್ನು ಬಿಡುವುದಿಲ್ಲ. ಆದರೆ ಅವನ ಅಭಿಪ್ರಾಯವನ್ನು ಅರ್ಥಮಾಡಿಕೊಳ್ಳುವ ಪ್ರಯತ್ನ ಮಾಡಿದಿರಿ. ಇದು ಅಗತ್ಯ.

ಸಾರ್ವಜನಿಕ ಅಭಿಪ್ರಾಯವನ್ನು ಮನ್ನಿಸಿರಿ, ಆದರೆ ತೆಗಳಿಕೆ – ಹೊಗಳಿಕೆಗಳಿಗೆ ಲಕ್ಷ್ಯ ಕೊಡಬೇಡಿ ಎಂದು ಸಾರ್ವಜನಿಕ ಜೀವನದಲ್ಲಿ ನಮಗೆ ಹೇಳಿ ಕೊಡುತ್ತಾರೆ. ಎಂಥ ದೊಡ್ಡ ವಿರೋಧಾಭಾಸ. ನಿಂದೆ – ಸ್ತುತಿಗಳ ಬಗ್ಗೆ ತಟಸ್ಥನಾಗು. ಜನಾಭಿಪ್ರಾಯಕ್ಕೆ ಬೆಲೆ ಕೊಡು. ಜನ ಬೇರೆ, ನಿಂದೆ–ಸ್ತುತಿ ಬೇರೆಯೇ? ಜನ ಎನ್ನುವ ವಸ್ತು ವ್ಯಕ್ತವಲ್ಲ, ಅವ್ಯಕ್ತ. ಜನ ಎಂಬ ಅವ್ಯಕ್ತದೊಳಗೆ ಮನುಷ್ಯ ಮುಳುಗಿ ಹೋಗುತ್ತಾನೆ. ಏನು ಪರಿಣಾಮ? ಜನ ಎಂಬ ವಸ್ತು ಒಂದು ಹುಟ್ಟಿ ಕೊಂಡಿತು. ಆ ವಸ್ತುವಿನ ಪೂಜೆ ಮೊದಲಾಯಿತು. ವ್ಯಕ್ತಿಗೆ ಮಾತ್ರ ಪೂರಾ ಉಪೇಕ್ಷೆಯೆ ಗತಿ. ವ್ಯಕ್ತಿಯ ಬಗ್ಗೆ ಪೂರಾ ತಟಸ್ಥರಾದಿರಿ ನೀವು.

ಜೂಲಿಯಾ ಬಾರ್ಡ್‌ಹೋವ್ ಒಬ್ಬ ಲೇಖಕಿ. ಒಮ್ಮೆ ರಾಜಕೀಯ ಪುರುಷನ ಬಳಿಗೆ ಒಬ್ಬ ವ್ಯಕ್ತಿಯನ್ನು ಕರೆನೊಯ್ದಳು. 'ಈ ಮನುಷ್ಯ ಕಷ್ಟದಲ್ಲಿ ಇದ್ದಾನೆ. ನಿಮ್ಮ ಸಹಾಯ ಈತನಿಗೆ ಬೇಕು. ಈತನ ವಿಷಯದಲ್ಲಿ ಸ್ವಲ್ಪ ಮನಸ್ಸಿಡಿ, ಸ್ವಲ್ಪ ಆಸಕ್ತಿ ವಹಿಸಿ' ಎಂದಳು. ಆತ ಹೇಳಿದ: 'ಜೂಲಿಯಾ, ನಾನು ತುಂಬಾ ಕೆಲಸದಲ್ಲಿದ್ದೇನೆ. ವ್ಯಕ್ತಿಗಳಿಗೆ ಗಮನ ಕೊಡಲಾರೆ'. ಜೂಲಿಯಾ ಹೇಳಿದಳು : 'ವ್ಯಕ್ತಿಗಳ ಬಗ್ಗೆ ಗಮನಕೊಡಲು ಸಾಧ್ಯವಿಲ್ಲ ಎಂಬ ಸ್ಥಿತಿಗೆ ದೇವರು ಕೂಡ ಬಂದಿಲ್ಲ. ನೀವು ಒಳ್ಳೇ ವಿಚಿತ್ರವಾದ ಮಾತನ್ನು ಹೇಳಿದಿರಿ' ಎಂದಳು. ಇದು ಮನುಷ್ಯನ ವಿಭೂತಿಯ ಪ್ರಶ್ನೆ, ವ್ಯಕ್ತಿತ್ವದ ಪ್ರಶ್ನೆ, ಮನುಷ್ಯ ಜೀವನದ ಸಮಸ್ಯೆ, ಅವನ ವಿಭೂತಿಯ ಸಮಸ್ಯೆ. ಆದ್ದರಿಂದಲೇ ನಾನು ಹೇಳಿದ್ದು – ಈ ಮಾನವವಾದ, ಹೊಸ ಮಾನವವಾದ, ಕ್ರಾಂತಿಕಾರಿ ಮಾನವವಾದಗಳಲ್ಲಿ ನೀವು ಸಿಕ್ಕಿಕೊಳ್ಳಬೇಡಿ. ನೀವು ಹೇಳುವ ಮಾತು ನಮ್ಮ ವಾದದಲ್ಲಿ ಬರುತ್ತದೆ ಎಂದು ಯಾರಾದರೂ ಹೇಳಿದರೆ ಸಂತೋಷ. ನಿಮಗಿಂತ ಮೊದಲೇ ನಾವು ಇದನ್ನು ಹೇಳಿದ್ದೇವು ಎನ್ನುತ್ತೀರಾ. ಇನ್ನೂ ಸಂತೋಷ. ನಮಗಿಂತ ಮೊದಲು ನೀವು ಇದನ್ನು ಹೇಳಿದ್ದೀರಿ ಎಂದು ಜನಕ್ಕೆ ಹೇಳಿಬಿಡುತ್ತೇವೆ. ಹೊಸ ಮಾತು ಹೇಳಬೇಕು ಎಂಬ ಚಿಂತೆ ನಮಗಿಲ್ಲ. ನಿಜವಾದ ಮಾತನ್ನು ಹೇಳಬೇಕು ಎಂಬ ಚಿಂತೆ ನಮ್ಮದು. ಯೋಚಿಸುವವರು ಸರಿಯಾಗಿ ಯೋಚಿಸಲಿ ಎಂಬ ಚಿಂತೆ. ನಮ್ಮದೇ ಒಂದು ಬೇರೆ ಮಾತು ಇದೆ ಎಂದರೆ ಎಲ್ಲರದೂ ಬೇರೆಬೇರೆ ಮಾತು ಇದೆ ಎಂದಹಾಗಾಯಿತು. ಒಬ್ಬೊಬ್ಬರದೂ ಒಂದು ಬೇರೆ ಮಾತು ಎಂದರೆ ಇವತ್ತಿನ ಹಾಗೇ ಈಗ ಒಬ್ಬರಿಗೊಬ್ಬರು ಬಹಳ ನಿಕಟವಾಗಿ ನಿಂತಿದೇವೆಯಾದರೂ. ಒಬ್ಬೊಬ್ಬರದೂ ಬೇರೆ ಮಾತು. ಪರಿಣಾಮ

'ಮ್ಯೂಚುಯಲ್ ಸೂಯಿಸೈಡ್.' ಈ ಶಬ್ದ ಬಹಳ ರೋಚಕವಾಗಿ ಕಂಡರೂ ಬಹಳ ವಿರೋಧಪೂರ್ಣ ಶಬ್ದ. ಆತ್ಮಹತ್ಯೆ, ಅದೂ ಪಾರಸ್ಪರಿಕ! ಪಾರಸ್ಪರಿಕ ಆತ್ಮಹತ್ಯೆ ಇವತ್ತಿನ ಯುದ್ಧದ ವರ್ಣನೆ. ಇವತ್ತು ಜನರ ಕಲ್ಪನೆಯಲ್ಲಿ ಕಾಣುವ ಯುದ್ಧಕ್ಕೆ ಇದು ಹೆಸರು. ಆತ್ಮಹತ್ಯೆ ಒಂಟಿಯಾಗಿ ಅಲ್ಲ, ಪರಸ್ಪರರ ಸಮ್ಮತಿಯಿಂದ, ಸಹಕಾರದಿಂದ. ಪರಸ್ಪರ ಸಮ್ಮತಿ – ಸಹಕಾರಗಳಿಂದ ಆತ್ಮ ಹತ್ಯೆ ಆಗಬಹುದು. ಪರಸ್ಪರ ಜೀವನ ಆಗಲಾರದೆ? ★

ರಾಜಕಾರಣ ಮತ್ತು ಸೇವಾ ಸಂಸ್ಥೆಗಳು ೫ ನೇ ಪುಟದಿಂದ

ಕ್ರಮಗಳಾಗಿದ್ದವು ಮತ್ತು ರಾಜಕಾರಣದ ಮೇಲೆ ನೈತಿಕ ಪ್ರಭಾವ ಬೀರುವಂಥವಾಗಿದ್ದವು. ರಚನಾತ್ಮಕ ಕಾರ್ಯ ಅಹಿಂಸಾತ್ಮಕ ಸೈನಿಕರ ಕವಾಯತ್ತು ಎಂದು ಗಾಂಧೀಜಿ ಹೇಳಿದ್ದರು ಮತ್ತು ರಾಜಕಾರಣಕ್ಕಿಂತ ರಚನಾತ್ಮಕ ಕಾರ್ಯ ಹೆಚ್ಚು ಮಹತ್ವದ್ದು ಮತ್ತು ಬಾಳಿಕೆಯದು ಎಂದೂ ಸೂಚಿಸಿದ್ದರು. ಅಂದಂದಿನ ಆರ್ಥಿಕಸಮಸ್ಯೆಗಳಿಗೆ ಅಂದಂದೇ ಪರಿಹಾರ ದೊರೆಯುವಂಥ ಆತ್ಮಶಕ್ತಿಯನ್ನು ಸಂಸ್ಥೆಗಳು ಬೆಳೆಸಿಕೊಳ್ಳಬೇಕೆಂದು ಬಯಸಿದ್ದರು. ಗಾಂಧಿಜೀಯವರು ಸೂಚಿಸಿದ್ದ ಈ ಮಾರ್ಗದಿಂದ ಸ್ವಯಂ ಸೇವಾ ಸಂಸ್ಥೆಗಳು ದೂರ ಸರಿದಿದ್ದರಿಂದಲೇ ಸ್ವತಂತ್ರ ಭಾರತದಲ್ಲಿ ಸ್ವಯಂ ಸೇವಾ ಸಂಸ್ಥೆಗಳು ಅತಂತ್ರವಾಗಿ ಉಳಿದಿವೆ.

ನಾಗರೀಕತೆಯ ಪ್ರಗತಿ – ಮೂಲಶಿಕ್ಷಣ

– ಆಚಾರ್ಯ ಕೃಪಲಾನಿ

(ಶಿಕ್ಷಣ ಕ್ಷೇತ್ರ ಎಂದಿನಿಂದಲೂ ವಿಮರ್ಶೆಗೆ ಒಳಗಾಗುತ್ತ ಬಂದಿರುವಂಥದು. ಶಿಕ್ಷಣವು ಅನ್ನ ಕಾಯಕದ ಸುತ್ತ ಇರಬೇಕೆಂಬ ಗಾಂಧೀಜಿಯವರ ವಿಚಾರದ ಬೆಳವಣಿಗೆಯನ್ನು ಕೃಪಲಾನಿಯವರು ಇಲ್ಲಿ ದಾಖಲಿಸಿದ್ದಾರೆ. ಗುರಿ ಮತ್ತು ಗುರು ಇಲ್ಲದ ಇಂದಿನ ಶಿಕ್ಷಣ ಪದ್ಧತಿಗೆ ವಿರುದ್ಧವಾಗಿ ಅನ್ನಕಾಯಕದ ಶಿಕ್ಷಣವು ಇಂದಿಗೂ ಪ್ರಸ್ತುತವಾಗಿದೆಯೆಂಬುದು ೬೨ ವರ್ಷಗಳ ಹಿಂದೆ ೧೯೩೮ ರಲ್ಲಿ ಗಾಂಧೀಜಿ ಹೇಳಿದ್ದರೆಂಬುದು ಆ ವಿಚಾರದ ಆಕರ್ಷಣೆ. ಇಲ್ಲಿ ಆ ವಿಚಾರಗಳನ್ನು ಕ್ರಮಶಃ ಕೊಡಲಾಗುತ್ತಿದೆ. ಇದು ಎರಡನೆಯ ಕಂತು ಸಂ.)

ಮಾನವೇತಿಹಾಸದ ಮುಂಬೆಳಗಿನಲ್ಲಿ ಮನುಷ್ಯ ತಾನು ಅಂಬೇಗಾಲಿಡುತ್ತಿದ್ದಾಗ ತಲೆಯನ್ನು ಮೇಲಕ್ಕೆತ್ತಿ ನೆಟ್ಟಗೆ ನಿಂತುದು ಹೇಗೊ? ಉಳಿದ ಪ್ರಾಣಿಗಳಂತಲ್ಲ. ಇವನೇ ಬೇರೆ ಎನಿಸುವ ಗುಣಲಕ್ಷಣಗಳನ್ನು ಮೆಲ್ಲಮೆಲ್ಲನೇ ಕ್ರಮವಾಗಿ ಗಳಿಸಿಕೊಂಡನೇನೊ? ದ್ವಿವಿಧ ಶಿಕ್ಷಣ ಕ್ರಮ ನಡೆದು ಬಂದಿದೆ– ವೀಕ್ಷಣ ಮತ್ತು ಪ್ರಯೋಗ. ಮೊದಲು ನೋಡಿದ, ಆಮೇಲೆ ಪ್ರಕೃತಿಯಲ್ಲಿ ಕೈವಾಡ ನಡೆಸಿದ. ಪ್ರಕೃತಿಯ ರೀತಿ ನೀತಿಗಳನ್ನು ನೋಡಿ ಕಲಿತು ಪದಾರ್ಥಗಳನ್ನು ರಚಿಸತೊಡಗಿದ. ತನ್ನ ಇಂದ್ರಿಯಗಳನ್ನು ಉಪಯೋಗಿಸಿದ. ಎಲ್ಲಕ್ಕಿಂತ ಹೆಚ್ಚಾಗಿ ತನ್ನ ಕೈಗಳನ್ನು – ಇಷ್ಟು ಜಾಣತನದಿಂದ ಅತಿ ಕುಶಲವಾಗಿ ಎಲ್ಲ ಪದಾರ್ಥಗಳನ್ನು ರೂಪಿಸುವ ಕೈಗಳನ್ನು – ಉಪಯೋಗಿಸಿದ. ಬಾಹ್ಯ ಪ್ರಕೃತಿಯಲ್ಲಿ ಕೆಲಸ ಮಾಡುತ್ತಿದ್ದರೂ ಪ್ರಕೃತಿಯ ಗುಣ ಸ್ವಭಾವಗಳನ್ನು ಅರಿತ. ಸ್ಫೂರ್ತಿ, ಭಾವನೆ ಮತ್ತು ವಿಚಾರಗಳನ್ನು ತನ್ನ ನೆರವಿಗೆ ಬರಮಾಡಿದ. ಅವನು ಕಂಡುಹಿಡಿದ ಯಾಂತ್ರಿಕ ಸಾಧನಗಳು ಎಡರು ತೊಡರುಗಳನ್ನು ದಾಟಲು ಅವನಿಗೆ ಶಕ್ತಿ ನೀಡಿದವು. ಹುಚ್ಚು ಪ್ರಕೃತಿಯ ಹುಡುಗಾಟದ ಆಟಿಕೆಯಾಗಿದ್ದವನು ಕ್ರಮಕ್ರಮವಾಗಿ ಪ್ರಕೃತಿಯ ಮೇಲೆ ಅಧಿಕಾರ ನಡೆಸತೊಡಗಿದ. ಪ್ರಕೃತಿಯನ್ನೂ, ತನ್ನ ಕೆಲಸ ಕಾರ್ಯಗಳನ್ನೂ ನಿರ್ವಹಿಸಿ ರೂಪಿಸುವ ಸಾಮಾನ್ಯ ಮೂಲನಿಯಮಗಳನ್ನು ಕಂಡುಹಿಡಿದ. ಅವನ ವಿಜ್ಞಾನ ಶಾಸ್ತ್ರಕ್ಕೆ ಇವೇ ತಳಹದಿ ಹಾಕಿದುದು. ಯಾಂತ್ರಿಕ ಕೆಲಸಗಾರನಾಗಿದ್ದವನು ಅಲ್ಲಿಂದ ಮುಂದೆ ವೈಜ್ಞಾನಿಕ ಕೆಲಸಗಾರನಾದ. ತನ್ನ ಕೈಗಳ ಮೂಲಕ ಯಂತ್ರಗಳಿಂದ ಕೆಲಸ ಮಾಡುತ್ತ ಅವನು ಕಂಡುಕೊಂಡ ಸಾಮಾನ್ಯ ನಿಯಮಗಳು ಮತ್ತಷ್ಟು ವಿಶಾಲವಾದ ತತ್ವಶಾಸ್ತ್ರವನ್ನು ಹುಟ್ಟಿಸಿದವು. ವಿಶ್ವದ ಅತ್ಯಂತ ಗುಪ್ತ ರಹಸ್ಯಗಳು ಕೂಡ ಅವನಿಗೆ ಈಗ ವ್ಯಕ್ತವಾದವು.

ಸ್ವಲ್ಪವೂ ಪಳಗದೇ ಇರುವ ಮೂಲ ಕೃತಿಯು ಅವ್ಯವಸ್ಥೆಯಲ್ಲಿ ಏನೋ ಒಂದು ವ್ಯವಸ್ಥೆಯನ್ನು ನಿರ್ಮಿಸಿದ. ಆಮೇಲೆ ತನ್ನೊಳಗೇ ನೋಡತೊಡಗಿದ. ಸಮಸ್ತ ಪ್ರಾಣಿಕೋಟಿಯಲ್ಲಿ ಸಂಶೋಧಿಸುವ, ರೂಪಿಸುವ ಶಕ್ತಿ ತನಗೊಬ್ಬನಿಗೇ. ಹಾಗಾದರೆ ತನ್ನ ಸುತ್ತಲಿನ ಚರಾಚರಕ್ಕಿಂತ ತಾನು ಬೇರೆಯೆಂದರೆ ಅದೆಂಥದು? ತನ್ನೊಳಗೆ ದೃಷ್ಟಿ ಬೀರಿದ. ತನ್ನೊಳಗೆ ಎಲ್ಲವನ್ನೂ ನಡೆಸುವ ನಿಯಮಗಳನ್ನು ಅರಿತುಕೊಂಡ. ಅದರಿಂದ ಮನಃಶಾಸ್ತ್ರ, ಆಧ್ಯಾತ್ಮಶಾಸ್ತ್ರ, ಧರ್ಮಗಳು ಕೊನರಿದವು. ಪ್ರಕೃತಿಯ ರಂಗದಲ್ಲಿ ಒಂಟಿಯಾಗಿ ಕೆಲಸ ಮಾಡುತ ತನ್ನ ನೆರೆಹೊರೆಯನ್ನು ತಾನೊಬ್ಬನೇ ಗೆಲ್ಲಲಾರನೆಂಬುದನ್ನು ಕಂಡುಕೊಂಡ. ಅದರಿಂದಾಗಿ ಅದೇ ರಂಗದಲ್ಲಿ ಕೆಲಸ ಮಾಡುವವರೆಲ್ಲರ ಸಹಕಾರವನ್ನು ಪಡೆಯಬೇಕಾಯಿತು. ನಿಧಾನವಾಗಿ ಕುಲ, ಜಾತಿ, ವರ್ಗ. ರಾಷ್ಟ್ರಗಳನ್ನು ಸೃಷ್ಟಿಸಿದ; ಪೌರ ಜೀವನವನ್ನೂ, ಆಡಳಿತವನ್ನೂ ಪ್ರಾರಂಭಿಸಿದ. ಇತರರೊಡನೆ ಮೈತ್ರಿಯಿಂದ ಬಾಳಲು ಬಯಸುವ ಸಮಾಜ ಜೀವಿಗೆ ಉಚಿತವಾಗುವಂಥ ನಿಯಮ-ನಿಬಂಧನೆಗಳನ್ನು ಮಾಡಿಕೊಂಡ. ಪ್ರಕೃತಿಯ ಮೇಲೆ ತನ್ನ ಅಧಿಕಾರ ನಡೆಸುವಾಗ, ಇತರರ ಅಂಥವೇ ಅಧಿಕಾರಗಳಿಗೆ ಅಡ್ಡಿಯಾಗದಂತೆ ಘರ್ಷಣೆಗೆ ಎಡೆಕೊಡದಂತೆ ತನ್ನ ಅಧಿಕಾರಿಗಳನ್ನು ಸವರಿಸಿಕೊಳ್ಳಬೇಕಲ್ಲ. ಹೀಗೆ ಸಾಮಾಜಿಕ, ರಾಜಕೀಯ ಕರ್ತವ್ಯಗಳೂ, ಜವಾಬ್ದಾರಿಗಳೂ, ಸ್ನೇಹ-ವಿಶ್ವಾಸಗಳನ್ನೂ ಸೃಷ್ಟಿಸಿಕೊಂಡು ತನ್ನ ಸ್ವಂತ ಬಾಳಿನಲ್ಲಿ ಮತ್ತು ಸಮಾಜದ ಜೀವನದಲ್ಲಿ ಶಾಸ್ತ್ರೀಯ ಹಾಗೂ ವ್ಯಾವಹಾರಿಕ ನೀತಿ, ನ್ಯಾಯ, ರಾಜ್ಯ ಶಾಸ್ತ್ರಗಳನ್ನು ಪ್ರವೇಶಗೊಳಿಸಿದ.

ಹೆಚ್ಚು ಕಡಮೆ ಪ್ರಾಣಿವರ್ಗಕ್ಕೇ ಸೇರಿದಂತಿದ್ದ ಕ್ರೂರ ಕಾಡುಮನುಷ್ಯ ತನ್ನನ್ನು ತಾನೇ ಪಳಗಿಸಿಕೊಂಡು ಮೇಲೇರಿದನೋ ಇಲ್ಲವೋ ತಾನು ಮೇಲೆ ಹತ್ತಿಬಂದ ಏಣಿಯನ್ನೇ ಮರೆತ. ಇನ್ನೇನು ತನ್ನ ಕೆಲಸ ಪೂರ್ಣವಾಯಿತೆಂದು ಅದನ್ನು ಬಿಸುಡಬಯಸುತ್ತಾನೆ. ಅವನ ಕೆಲಸ ನಿಜವಾಗಿಯೂ ಪೂರ್ಣವಾಗಿದೆಯೆ? ಈಗ ಲಭಿಸಿರುವುದನ್ನೆಲ್ಲ ಭದ್ರಮಾಡಿಕೊಂಡು ಮತ್ತೆ ಮುಂದೆ ಗೆಲ್ಲಬೇಡವೆ? ಹಾಗಾದರೆ ಮತ್ತೆ ಹಳೆಯ ಜಾಡಿನಲ್ಲೇ ಇವನ ಪ್ರಯತ್ನ ನಡೆಯಬೇಕು. ಇಲ್ಲದಿದ್ದರೆ ಅವನತಿಯ ಪಾಲೇ. ಮಾತಿನಲ್ಲಿ, ಆಚಾರದಲ್ಲಿ ಅವನತಿ ಬಹಳ ಚುರುಕು; ರಚನಾತ್ಮಕ ವಿಚಾರ, ಕ್ರಿಯಾಪ್ರವೃತ್ತಿ ಮಾತ್ರ ಅದಕ್ಕಿಲ್ಲ. ಒಂದು ನಾಗರೀಕತೆ ನಶಿಸಿ ಹೋಗುವ ಮುನ್ನ ಯಾವಾಗಲೋ ಇಂಥ ಅವನತಿ ಅದಕ್ಕೆ ಬಡಿದುಕೊಳ್ಳುತ್ತದೆ. ಇತಿಹಾಸವೇ ಹಾಗೇ.

ಮಗು ಹುಟ್ಟಿ ಅದರ ಇಂದ್ರಿಯಗಳು ಕೆಲಸ ಮಾಡಲು ಮೊದಲಿಟ್ಟಾಗ

ಅದು ಈ ಆದಿಕಾಲದ ಕಾಡುಮನುಷ್ಯನೇ. ಅವನನ್ನು ಶಿಕ್ಷಣದ ಮೂಲಕ ಮೇಲಕ್ಕೆತ್ತಿ ನಾಗರಿಕನನ್ನಾಗಿ ಮಾಡಬೇಕು. ಆದರೆ ಈಗಿನ ಶಿಕ್ಷಣ ಪದ್ಧತಿ ಅವನನ್ನು ಪ್ರಾಣಿಮಾತ್ರ ಎಂದು ಪರಿಗಣಿಸುತ್ತದೆ. ಶಬ್ದಗಳನ್ನೂ ವಾಕ್ಯಗಳನ್ನೂ ಗಿಳಿಯ ಹಾಗೆ ಮತ್ತೆಮತ್ತೆ ಹೇಳುವಂತೆ ಅವನನ್ನು ತರಬೇತು ಮಾಡುತ್ತಾರೆ. ಹೇಳಿದುದನ್ನೇ ಹೇಳುತ್ತಾ ಕೆಲವು ದಿನಗಳಲ್ಲಿ ಅವನು 'ಕಿಸುಬಾಯಿ ದಾಸಯ್ಯ' ಆಗುತ್ತಾನೆ. ಈ ಪುಟ್ಟ ಪ್ರಾಣಿಯನ್ನು ಆಗಾಗ ಗೆಳೆಯರ ಮುಂದೆ, ನೆರೆಹೊರೆಯವರ ಮುಂದೆ ತಂದು ನಿಲ್ಲಿಸಿ ಆ ಮಾತಿನ ಚಮತ್ಕಾರವನ್ನೂ, ಶಬ್ದ ಪಾಂಡಿತ್ಯವನ್ನೂ ಪ್ರದರ್ಶಿಸುತ್ತಾರೆ. ಪ್ರದರ್ಶನ ಸಫಲವಾದರೆ ಅದಕ್ಕೆ ತಕ್ಕ ಪ್ರಮಾಣ ಪತ್ರಗಳನ್ನು ಕೊಡುತ್ತಾರೆ. ಆಮೇಲೆ ನಾಯಿಮರಿಗೆ, ಕೋತಿಮರಿಗೆ ಕಲಿಸುವ ಹಾಗೇ ಇವನಿಗೂ ಕೆಲವು ವ್ಯಾವಹಾರಿಕ ಯುಕ್ತಿಗಳನ್ನು ಕಲಿಸುತ್ತಾರೆ. ಅವನಿಗೆ ಅವು ಅರ್ಥವಾಗುವುದೇ ಇಲ್ಲ. ಅದರ ಅಂತರಾರ್ಥ, ವಿಧಾನಗಳನ್ನು ಅರಿಯಲಾರ. ಕೇವಲ ಯಂತ್ರವತ್ತಾಗಿ ಅವನ್ನು ಮಾಡುತ್ತಾನೆ. ಶಿಕ್ಷಣ ಎಂದು ಸುಳ್ಳು ಹೆಸರಿಟ್ಟ ಈ ಗಾಣದಲ್ಲಿ ಅವನು ಹುಡಿ-ಹಿಂಡಿ ಆಗುತ್ತಿಲ್ಲವಲ್ಲ ಅಂದರೆ ಅದು ಈ ಶಿಕ್ಷಣದ ಲೋಪವಲ್ಲ. ಅವನು ನಿಜವಾಗಿ ಪ್ರಾಣಿಯಲ್ಲ, ಮನುಷ್ಯ ಆಗಿರುವುದೇ ಅದಕ್ಕೆ ಕಾರಣ. ಈ ಶಿಕ್ಷಣ ತಂದೊಡ್ಡುವ ಅಡಚಣೆ ಆತಂಕಗಳನ್ನೆಲ್ಲಾ ಅವನು ಜಿಗಿದು ದಾಟುತ್ತಾನೆ. ಈ ಪದ್ಧತಿ ಇಷ್ಟು ಅಡ್ಡಿ ಮಾಡಿದರೂ ಹೇಗೋ ಸ್ವಲ್ಪ ಜ್ಞಾನ ಪಡೆಯುತ್ತಾನೆ. ಆದರೆ ವ್ಯಕ್ತಿಯ ವಿಕಾಸದ ಸಹಜ ಮಾರ್ಗವನ್ನು ಶಿಕ್ಷಣ ಪದ್ಧತಿ ಅನುಸರಿಸಿದರೆ ಮಾನವ ಇನ್ನೂ ಬೇಗನೇ ಉತ್ತಮ ಶಿಕ್ಷಣ ಪಡೆಯಬಲ್ಲನೆಂಬುದು ಖಂಡಿತ. ಆಗ ಬರೀ ಬುದ್ಧಿಯೊಂದೇ ಅಲ್ಲ, ಸಮಸ್ತ ಪ್ರವೃತ್ತಿಗಳೂ ಬಲಗೊಂಡು ವಿಕಸಿತವಾಗುತ್ತವೆ. ಕಣ್ಣು – ಕೈ – ಉಳಿದ ಕರಣಗಳು ತರಬೇತಾಗುತ್ತವೆ. ಎಲ್ಲವೂ ಚುರುಕಾಗುತ್ತವೆ. ಅವನ ಭಾವನಾಶಕ್ತಿ, ಕಲ್ಪನಾಶಕ್ತಿಗಳು ಅರಳಿ ಫಲಕಾರಿಯಾಗುತ್ತವೆ. ಇಂದಿನ ಹಲವಾರು ನಿರ್ಬಂಧ, ನಿಷೇಧಗಳಿಗೆ ಸಿಕ್ಕಿ ನರಳುತ್ತಿರುವುದು ತಪ್ಪುತ್ತದೆ. ಯೋಜನಾನುಸಾರ ಕೆಲಸ ಮಾಡುತ್ತ ಕ್ರಿಯಾಶಕ್ತಿಯನ್ನು ಬೆಳೆಸಿಕೊಂಡು ಸಮಗ್ರ ವ್ಯಕ್ತಿಯಾಗುತ್ತಾನೆ.

ಮನಃಶಾಸ್ತ್ರದ ರೀತಿಯಿಂದಲೂ ಬೆಳೆಯುವ ಮಗುವಿಗೆ ಈ ಬಗೆಯ ಶಿಕ್ಷಣ ಅಗತ್ಯ. ಅವನ ಸ್ವಭಾವ ವ್ಯಕ್ತವಾಗುವುದಕ್ಕೆ, ವಿಕಾಸಗೊಳ್ಳುವುದಕ್ಕೆ ಸಾಕಾದಷ್ಟು ಶಾರೀರಿಕ ಚಟುವಟಿಕೆ ಬೇಕು. ಕೆಲಸ ಮತ್ತು ಆಟಗಳಿಂದಲೇ ಅವನ ಮೆದುಳು ಕ್ರಿಯಾಶೀಲವಾಗಬಲ್ಲದು. ನಿರಂತರ ಉಕ್ಕಿ ತುಳುಕುವ ಮಗುವಿನ ಚೇತನಕ್ಕೆ ಪ್ರಕಟವಾಗಲು ಸಾಂಪ್ರದಾಯಿಕ ಶಾಲೆಗಳಲ್ಲಿ

ಉಪಯುಕ್ತ ಕ್ಷೇತ್ರ ಯಾವುದೂ ಇಲ್ಲ. ಆದ್ದರಿಂದ ಆ ಚೇತನ ಪುಂಡು ಪೋಕರಿತನದ ವಿಧ್ವಂಸಕ ಮಾರ್ಗಕ್ಕೆ ತಿರುಗುತ್ತದೆ. ಅವನ ಸೃಷ್ಟಿ ಸಾಮರ್ಥ್ಯಕ್ಕೆ ತರಬೇತಿ ಮತ್ತು ಮಾರ್ಗದರ್ಶನವಿಲ್ಲದೆ ದಂಡನೆ ದಮನಗಳಿಂದ – ಅದು ವ್ಯರ್ಥವೂ ನಿರರ್ಥಕವೂ ಆಗುತ್ತದೆ. ನಯನಾಜೂಕು, ಕನಿಕರ ಇಲ್ಲದ ಈ ಪ್ರಪಂಚದ ಜೀವನ ಸಂಗ್ರಾಮದಲ್ಲಿ ಮುಂದೆ ಕೈಸೋತು ಬಳಲುವಂಥ ವಿನಮ್ರ ಕ್ರಿಯಾ ಶೂನ್ಯ ವಿದ್ಯಾರ್ಥಿಗಳಿಗೆ ಈ ಹೊಸ ಪದ್ಧತಿ ಚೇತೋದಾಯಕವಾಗಿ ಅವರ ಬುದ್ಧಿ, ಜ್ಞಾಪಕಶಕ್ತಿಗಳ ಜೊತೆಗೆ ಇತರ ಶಕ್ತಿಗಳನ್ನೂ ಉಪಯೋಗಿಸಲು ಕಲಿಸುತ್ತದೆ. ಇಂದಿನ ಶಾಲೆಗಳಲ್ಲಿ ಚೇತನಪೂರ್ಣ, ಕ್ರಿಯಾಶೀಲ, ತಂಟೆಕೋರ, ನಿಗ್ರಹಕಠಿನ, ಅಡ್ಡದಾರಿಯ, ಸದಾ ಬೈಗಳಿಗೆ, ಏಟಿಗೆ ಗುರಿಯಾಗುವ ವಿದ್ಯಾರ್ಥಿ ಗಳು ಈ ಶಿಕ್ಷಣ ಪದ್ಧತಿಯಿಂದ ಸ್ವರೂಪ ವ್ಯಕ್ತಿತ್ವ ಪಡೆದು ತಮ್ಮ ವಿಶಿಷ್ಟ ಶಕ್ತಿಗಳಿಂದ ಸಮಾಜವನ್ನು ಸಂಪನ್ನಗೊಳಿಸುತ್ತಾರೆ. ಬೋಧನೆಗೆ ಕೈಗಾರಿಕಾ ಪದ್ಧತಿ ಮಾಧ್ಯಮವಾದಾಗ ಮಗುವಿನ ಸುಪ್ತಶಕ್ತಿಗಳೆಲ್ಲ ಪ್ರಕಟವಾ ಗುವುದಲ್ಲದೆ ಅವನಿಗೆ ತನ್ನ ಕೆಲಸದಲ್ಲಿ, ಶಾಲೆಯಲ್ಲಿ, ಜೊತೆಗಾರರಲ್ಲಿ, ಅಧ್ಯಾ ಪಕರಲ್ಲಿ ಹರ್ಷ ಉಲ್ಲಾಸಗಳು ಮೂಡುತ್ತವೆ. ಆದರೆ ಆಗ ಶಿಕ್ಷಕ ಈಗಿನಂತೆ ಬರೀ ದುಡಿಸುವ ಮೇಸ್ತ್ರಿಯಾಗಿರುವುದಿಲ್ಲ. ಆಟದಲ್ಲಿ ಹಿರಿಯಣ್ಣ, ಗೆಳೆಯ, ಮಾರ್ಗದರ್ಶಕ, ನಾಯಕ ಆಗುತ್ತಾನೆ. ಇಂದು ಅದು ಇಲ್ಲ.

ಕಲಿ, ಬೆಳೆ ಎಂಬ ಈ ಸಹಜ ಕ್ರಮ ಮಾನವ ವರ್ಗಕ್ಕೆ ಬಹಳ ಕಷ್ಟ ತರವಾಗಿದೆ. ನಾವು ಮಾಡುತ್ತ, ಮಣಿಯುತ್ತ ಬಿದ್ದು-ಎದ್ದು ಜ್ಞಾನವನ್ನು ಪಡೆದಿದ್ದೇವೆ. ಇದರಲ್ಲಿ ಗೆಲುವು ಸ್ವಾಭಾವಿಕವಾಗಿಲ್ಲ, ಅಪವಾದ. ನಿಧಾನವಾದ, ಕಷ್ಟತರವಾದ ಪ್ರಯತ್ನ – ಪರಾಭವಗಳ ಇದೇ ಜಾಡನ್ನೇ ತನ್ನ ಶಿಕ್ಷಣದಲ್ಲಿ ಮಗು ಹಿಡಿಯಬೇಕೆ? ಸೋಲಿನ ಪರಂಪರೆ ಮುಗಿದು ಕಟ್ಟಕಡೆಯಲ್ಲಿಯೋ ಸಿಗಬೇಕೆ ಗೆಲವು? ಹೀಗಾದರೆ ಬಾಳಿನಲ್ಲಿ ಧುಮುಕಿ ಯಾವುದೋ ಒಂದು ವೃತ್ತಿಯನ್ನೋ ವ್ಯಾಪಾರವನ್ನೋ ಹಿಡಿಯುವ ಮೊದಲು ಅವನಿಗೆ ಸಿಗುವ ಒಂದೆರಡು ವರ್ಷ ಗಳಲ್ಲಿ ಅವನು ಎಷ್ಟು ಕಲಿತಾನು? ಯುಗ ಯುಗಗಳಿಂದ ಬಂದ ಅನುಭವವನ್ನು ಅವನು ಪಡೆಯಬೇಡವೆ? ಪುಸ್ತಕಗಳಾಗಲಿ, ಶಿಕ್ಷಕರುಗಳಾಗಲಿ ಹೊಸ ಪದ್ಧತಿಯಲ್ಲಿ ವರ್ಜ್ಯವಲ್ಲ. ಜ್ಞಾನಾರ್ಜನೆಯಲ್ಲಿ ಅವನಿಗೆ ದಾರಿ ತೋರಿ, ಕ್ರಮವನ್ನು ಕಲಿಸಿ ಬೇಗ ಬೇಗ ಮುಂಬರಿಯುವಂತೆ ನೆರವು ಕೊಡಲು ಇದ್ದೇ ಇರಬೇಕು. ಪ್ರಗತಿಯು ನಿಧಾನವೂ, ಕಷ್ಟಮಯವೂ ಆಗಬೇಕಾಗಿಲ್ಲ. ಹೊಸ ಪದ್ಧತಿಯ ಕಾರಣದಿಂದ ಪ್ರಗತಿಯ ವೇಗ ಹೆಚ್ಚುತ್ತದೆ. ಇಟ್ಟ ಒಂದೊಂದು ಹೆಜ್ಜೆಯೂ ಅವನ ಸ್ವಾನುಭವದೊಡನೆ ಸಮನ್ವಯಗೊಂಡು ಸಮರಸವಾಗುತ್ತದೆ. ಸ್ವಾನುಭವಕ್ಕೆ ಅವನೇ ಮುಖ್ಯವಾದ ಮೂಲ ಸಾಧನ. ಇತರರು ಮಾಡಿ ಪಡೆದ ಫಲಿತಗಳೇ

ಅವನ ಜ್ಞಾನದ ಮೇರೆಯಾಗುವುದಿಲ್ಲ. ವಿಷಯ ಸಂಗ್ರಹದ, ಜ್ಞಾನಾರ್ಜನೆಯ ರೀತಿಗಳನ್ನು ಅವನು ಕಲಿಯುತ್ತಾನೆ. ಒಂದೊಂದು ಹೆಜ್ಜೆಯನ್ನೂ ವಿಚಾರ ಮಾಡಿ ತಿಳಿದು ಗೊತ್ತಾದ ಗುರಿಯ ಕಡೆಯೇ ಇಡುತ್ತಾನೆ. ಹೀಗೆ ಬರೀ ವಿಷಯ ಜ್ಞಾನವಲ್ಲದೆ ಪರಿಶೋಧನೆ, ವಿಚಾರಮಂಥನಗಳ ನಿಯಮಗಳನ್ನು ಅರಿತು ಕೊಳ್ಳಲೂ ಮಗುವಿಗೆ ಕಲಿಸಲಾಗುತ್ತದೆ. ಈ ರೀತಿ ಅವನು ಪಡೆದುದೆಲ್ಲ ರಕ್ತ ಗತವಾಗುತ್ತದೆ. ವಿಚಾರ ಮಾಡುವ ವೈಜ್ಞಾನಿಕ ಕ್ರಮ ಅವನಿಗೆ ಸಹಜ ವಾಗಿಯೇ ಬರುತ್ತದೆ.

ಉದಾಹರಣೆಗೆ, ಅವನ ಕೈದಾರದಿಂದ ಬಟ್ಟೆ ಮಾಡುವುದಾದರೆ, ಅದರ ಬೇಕಾದ ಪದಾರ್ಥ ಹತ್ತಿ ಹತ್ತಿಯನ್ನು ಕಂಡುಕೊಂಡ ಕಥೆ, ಅದರ ಬೆಳೆ, ಎಲ್ಲೆಲ್ಲಿ ಅದು ಬೆಳೆಯುತ್ತದೆಂಬ ವಿವರ, ಎಲ್ಲವನ್ನೂ ತಿಳಿದುಕೊಳ್ಳಲಾರಂಭಿಸು ತ್ತಾನೆ. ಹತ್ತಿ ಯಾವ ವಾತಾವರಣ, ನೀರು, ನೆಲಗಳಲ್ಲಿ ಬೆಳೆಯುತ್ತದೋ ತಿಳಿದುಕೊಳ್ಳುತ್ತಾನೆ. ಇತರ ಬೆಳೆಗಳಿಗೆ ಹೋಲಿಸುತ್ತಾನೆ. ಹೀಗೆ ಸ್ವಲ್ಪ ಭೂ ಗೋಳ ಬೇಸಾಯಗಳನ್ನು ಚೆನ್ನಾಗಿ ಅರಗಿಸಿಕೊಳ್ಳುತ್ತಾನೆ. ಹತ್ತಿ ಹಿಂಜುವುದನ್ನು ಕಲಿತಾಗಲೂ ಮಾನವೇತಿಹಾಸದಲ್ಲಿ ಹತ್ತಿಯನ್ನು ಹಸನ ಮಾಡಿ ಹಿಂಜಲು ಏನೇನು ಸಾಧನಗಳನ್ನು ನಿರ್ಮಿಸಿದರೊ ತಿಳಿದುಕೊಳ್ಳುತ್ತಾನೆ. ನೂಲುವುದರಿಂದ ತೂಕ, ಅಳತೆ, ಕಾಲದ ವಿಭಾಗಗಳನ್ನು ಕಲಿಯುತ್ತಾನೆ, ಇವಕ್ಕಾಗಿ ಕಂಡುಹಿಡಿದ ನಾನಾ ಯಂತ್ರೋಪಾಯಗಳ ಜ್ಞಾನ ಸಿಗುತ್ತದೆ. ತಾನು ಉಪಯೋಗಿಸುವ ಯಂತ್ರದ ಸೂತ್ರ-ನಿಯಮಗಳನ್ನು ಕಲಿಯುತ್ತಾನೆ. ನೇಯ್ಗೆಯನ್ನು ಕಲಿಯು ವಾಗ ಮಗ್ಗದ ಹೆಚ್ಚು ಕ್ಲಿಷ್ಟವಾದ ಯಾಂತ್ರಿಕ ನಿಯಮಗಳನ್ನೂ ಅದರ ವಿಕಾ ಸದ ಇತಿಹಾಸವನ್ನೂ ಅರಿತುಕೊಳ್ಳುತ್ತಾನೆ. ನೇಯ್ಗೆಯನ್ನು ಕಲಿಯುವಾಗ ಮಗ್ಗದ ಹೆಚ್ಚು ಕ್ಲಿಷ್ಟವಾದ ಯಾಂತ್ರಿಕ ನಿಯಮಗಳನ್ನೂ ಅದರ ವಿಕಾಸದ ಇತಿಹಾಸವನ್ನೂ ಅರಿತುಕೊಳ್ಳುತ್ತಾನೆ. ಪ್ರತಿಯೊಂದು ಹೊಸ ಕ್ರಿಯೆಯಿಂದಲೂ ಅವನ ವಿಷಯ ಸಂಗ್ರಹ ಹೆಚ್ಚುತ್ತದೆ, ಸಮನ್ವಯವಾಗುತ್ತದೆ. ತನ್ನ ಜ್ಞಾನದ ಯಾವ ಭಾಗವನ್ನೂ ಅವನು ಗಿಳಿಪಾಠ ಮಾಡಬೇಕಾಗಿಲ್ಲ. ಹೀಗೆ ಅವನು ಗಳಿಸಿದ ಜ್ಞಾನ ಅವನ ವ್ಯಕ್ತಿತ್ವದ ಅಂಗವಾಗುತ್ತದೆ. ಈ ಜ್ಞಾನದಿಂದ ಅವನ ವ್ಯವಹಾರ ಸಾಮರ್ಥ್ಯವೂ ಬೆಳೆಯುತ್ತದೆ.

(ಮುಂದುವರಿಯುವುದು)

ತತ್ವಕ್ಕಾಗಿ ರಾಜೀನಾಮೆಯಿತ್ತ ಮಂತ್ರಿ - ಯಶೋಧರಾ ದಾಸಪ್ಪ

–ಬಿ. ಆರ್. ಪ್ರಾಣೇಶರಾವ್

[ತತ್ವರಹಿತ ರಾಜಕಾರಣ ಒಂದು ಸಾಮಾಜಿಕ ಪಾತಕವೆಂದು ಗಾಂಧೀಜಿ ಹೇಳಿದ್ದರು. ಇಂದು ಎಲ್ಲೆಲ್ಲೂ ತತ್ವರಹಿತ ರಾಜಕಾರಣ ಸಹಜವಾಗಿ ಕಾಣಿಸುತ್ತಿರುವಾಗ ಅಧಿಕಾರಕ್ಕಿಂತ ತತ್ವ ಹಿರಿದೆಂಬ ನಂಬಿಕೆಯಿಂದ ಮಂತ್ರಿಪದವಿಯನ್ನು ತ್ಯಾಗ ಮಾಡಿ ಮಿಂಚಿದ ಯಶೋಧರಮ್ಮ ದಾಸಪ್ಪ ಇಂದಿನ ರಾಜಕಾರಣಿಗಳಿಗೆ ಮೇಲ್ಪಂಕ್ತಿ ಹಾಕಿಕೊಟ್ಟಿದ್ದಾರೆ ಅವರ ಸಂಕ್ಷಿಪ್ತ ಜೀವನ ಪರಿಚಯ ಇಲ್ಲಿದೆ. –ಸಂ]

ಶ್ರೀ ನಿಜಲಿಂಗಪ್ಪನವರ ಮಂತ್ರಿ ಮಂಡಲ ಪಾನನಿರೋಧ ನೀತಿಯ ಬಗ್ಗೆ ತಾಳಿದ ನಿಲುವು ಯಶೋಧರಮ್ಮನವರಿಗೆ ಹಿಡಿಸಲಿಲ್ಲ. ಪಾನನಿರೋಧ ನೀತಿಯನ್ನು ಕೈಬಿಡುವ ಮಂತ್ರಿಮಂಡಲದ ನಿರ್ಧಾರ ಅವರಿಗೆ ತುಂಬಾ ನೋವುಂಟು ಮಾಡಿತು. ಪಾನನಿರೋಧ ನೀತಿಯನ್ನು ರದ್ದು ಮಾಡುವುದರಿಂದ ಲಕ್ಷಾಂತರ ಬಡಜನರ, ಅದರಲ್ಲೂ ಹರಿಜನ ಹಾಗೂ ದಲಿತವರ್ಗದವರ ಬಾಳು, ಕಂಗಾಲಾಗುವುದೆಂದು ಅವರ ಸ್ಪಷ್ಟ ಅನಿಸಿಕೆ ಆಗಿತ್ತು. ಗಾಂಧೀ ತತ್ವಕ್ಕೆ ತಿಲಾಂಜಲಿ ನೀಡುವ ನೀತಿಯೊಂದಿಗೆ ರಾಜಿಯೇ ಇಲ್ಲ. ತಕ್ಷಣ ರಾಜೀನಾಮೆ ಕಳುಹಿಸಿದರು.

ಮಂತ್ರಿ ಮಂಡಲದಲ್ಲಿ ಯಶೋಧರಮ್ಮನವರನ್ನು ಉಳಿಸಿಕೊಳ್ಳುವುದಕ್ಕೆ ಪ್ರಯತ್ನಗಳೇನೊ ನಡೆದವು. ಅಂದಿನ ಪ್ರಧಾನಿ ಲಾಲ್‌ಬಹದ್ದೂರ್ ಶಾಸ್ತ್ರಿಯವರು ನಿಜಲಿಂಗಪ್ಪನವರಿಗೆ ಕಾಗದ ಬರೆದು ಮಂತ್ರಿ ಮಂಡಲದಲ್ಲಿ ಇರುವಂತೆ ಯಶೋಧರಮ್ಮನವರ ಮನವೊಲಿಸಿರಿ ಎಂದು ತಿಳಿಸಿದರು.

ಯಶೋಧರಾ ನಿಲುವು ಸ್ಪಷ್ಟ. "ನಾನು ಮಂತ್ರಿ ಮಂಡಲದಲ್ಲಿರಬೇಕಾದರೆ ಪಾನನಿರೋಧ ನೀತಿಯನ್ನು ಜಾರಿಯಲ್ಲಿಡಿ."

ನಿಜಲಿಂಗಪ್ಪನವರು ತಮ್ಮ ಧೋರಣೆಯನ್ನು ಬದಲಾಯಿಸಲು ಸಿದ್ಧರಿರಲಿಲ್ಲ. ಕಡೆಗೆ ಯಶೋಧರಮ್ಮನವರು ನಿಚ್ಚಳವಾದ ನಿಲುವನ್ನು ಮಂತ್ರಿ ಮಂಡಲದ ಸದಸ್ಯರಿಗೆ ತಿಳಿಸಿದರು. ಅವರ ವಾದದಲ್ಲಿ ಬಡಜನರ ಬಗ್ಗೆ ಕಳಕಳಿ ಹಾಗೂ ತಾವು ನಂಬಿದ್ದ ತತ್ವದಲ್ಲಿ ನಿಷ್ಠೆ ವ್ಯಕ್ತವಾಯಿತಲ್ಲದೆ ಅವರಲ್ಲಿ ಯಾರ ಬಗೆಗೂ ಯಾವ ಕಹಿಯೂ ಇರಲಿಲ್ಲ. ಸಚಿವ ಸಂಪುಟದ ಸಭೆಯನ್ನು ಬಿಟ್ಟು ಕಟ್ಟಕಡೆಯದಾಗಿ ಬರುವಾಗ ಮಂತ್ರಿಗಳಿಗೆಲ್ಲಾ ಸಿಹಿ ಹಂಚಿ ಹೊರ ಬಂದರು!

ಯಶೋಧರಾ ದಾಸಪ್ಪ ಅನೇಕ ರಚನಾತ್ಮಕ ಕಾರ್ಯಕರ್ತರಿಗೆ ಹಾಗೂ ಸಮಾಜಸೇವಕರಿಗೆ ತಾಯಿಯಂತಿದ್ದರು. ಪರಿಶುದ್ಧ ಅಂತ:ಕರಣ, ಮಾನವಪ್ರೇಮ, ಅನುಕಂಪ ಹಾಗೂ ದಿಟ್ಟತನ ಅವರ ಅನುಪಮ ಗುಣಗಳು.

ಐವತ್ತು ವರ್ಷಗಳ ಸುದೀರ್ಘ ಸಾರ್ವಜನಿಕ ಜೀವನದಲ್ಲಿ ಸ್ವಾತಂತ್ರ್ಯ ಸಮರ, ಸಮಾಜಸೇವೆ, ರಾಜಕಾರಣ, ರಚನಾತ್ಮಕ ಕಾರ್ಯಕ್ಷೇತ್ರಗಳಲ್ಲಿ ಸಮರ್ಪಣ ಭಾವದಿಂದ ಕಾರ್ಯವೆಸಗಿದರು. ತತ್ವನಿಷ್ಠೆ ಮತ್ತು ಕಾರ್ಯದಕ್ಷತೆಯಿಂದ ಈ ಎಲ್ಲ ಕ್ಷೇತ್ರಗಳ ಮೇಲೆ ಅಪೂರ್ವ ವರ್ಚಸ್ಸು ಬೀರಿದರು.

ಯಶೋಧರಾ ಹುಟ್ಟಿದ್ದು ೧೯೦೫ರ ಮೇ ೨೮. ತಂದೆ ಕೆ.ಎಚ್. ರಾಮಯ್ಯ, ತಾಯಿ ರೇವಮ್ಮ. ಸಮಾಜ ಸುಧಾರಕರಾಗಿದ್ದ ಕೆ. ಎಚ್. ರಾಮಯ್ಯನವರ ಪ್ರಭಾವ ಯಶೋಧರಾ ಮೇಲೆ ಬಹಳಷ್ಟು ಆಗಿದ್ದಿತು. ಬೆಂಗಳೂರು ಮತ್ತು ಮದರಾಸಿನಲ್ಲಿ ಪ್ರೌಢ ಶಿಕ್ಷಣ ಪಡೆಯುವ ಸಂದರ್ಭದಲ್ಲೇ ಸಮಾಜಸೇವೆಯ ಗೀಳೂ ಬಂದಿತ್ತು. ೧೯೨೭ರಲ್ಲಿ ಶ್ರೀ ಎಚ್. ಸಿ. ದಾಸಪ್ಪನವರೊಂದಿಗೆ ವಿವಾಹವಾಯಿತು. ದಾಸಪ್ಪ ಆಗ ಪ್ರಸಿದ್ಧ ವಕೀಲರು. ಹಿಂದುಳಿದ ವರ್ಗಗಳ ಮುನ್ನಡೆಗೆ ಚಳುವಳಿ ನಡೆಯುತ್ತಿದ್ದ ಕಾಲ ಅದು. ದಾಸಪ್ಪನವರು ಚಳುವಳಿಯ ಮಂಚೂಣಿಯಲ್ಲಿದ್ದರು. ಪೌರಸಭೆ, ಪ್ರಜಾಪ್ರತಿನಿಧಿ ಸಭೆ ಮತ್ತು ಇತರ ಸಾರ್ವಜನಿಕ ಸಂಸ್ಥೆಗಳಲ್ಲಿ ಕ್ರಿಯಾಶೀಲ ನಾಯಕರಾಗಿ ಕೆಲಸ ಮಾಡುತ್ತಿದ್ದರು. ಇನ್ನೂ ಕಾಂಗ್ರೆಸ್ ಸೇರಿರಲಿಲ್ಲ.

ಹಿಂದೀ ಅಧ್ಯಯನ, ಸ್ತ್ರೀ ಸಮಾಜಗಳ ಸಂಘಟನೆಯಲ್ಲಿ ತೊಡಗಿದ್ದ ಯಶೋಧರಾಗೆ ಸ್ವಾತಂತ್ರ್ಯ ಹೋರಾಟದ ಸೆಳೆತ ಮೊದಲು ಬಂದಿತು. ಅಂತೆಯೇ ಕಾಂಗ್ರೆಸ್ಸಿಗೆ ಸೇರಿದರು. ಖಾದಿ ಹಾಕಿದರು. ಈ ಮಧ್ಯೆ ಅಂದಿನ ಮೈಸೂರು ಸಂಸ್ಥಾನದ ಪ್ರಜಾಪ್ರತಿನಿಧಿ ಸಭೆಗೆ ಚುನಾವಣೆ ನಡೆಯಿತು. ದಾಸಪ್ಪನವರು ಪ್ರಜಾಪಕ್ಷದ ಅಭ್ಯರ್ಥಿ; ಲಾಯರ್ ಲಿಂಗಪ್ಪಯ್ಯನವರು ಕಾಂಗ್ರೆಸ್ ಅಭ್ಯರ್ಥಿ. ಯಶೋಧರಾ ತಮ್ಮ ಗಂಡನ ಕಾರಿನಲ್ಲಿ ಮತಗಟ್ಟೆಗೆ ಹೋಗಿ ಪತಿಯ ವಿರುದ್ಧವಾಗಿ ಕಾಂಗ್ರೆಸ್ ಅಭ್ಯರ್ಥಿಗೆ ಓಟು ಮಾಡಿ ಬಂದರು! ಕಡೆಗೆ ದಾಸಪ್ಪನವರು ಕಾಂಗ್ರೆಸ್ ಸೇರಿದರು. ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ ಅನೇಕ ಬಾರಿ ಸೆರೆಮನೆ ಸೇರಿದರು.

ಮತ್ತೊಮ್ಮೆ ಮೈಸೂರಿನ ಪರಿಮಿತಿ ಮತದಾರರ ಕ್ಷೇತ್ರದಿಂದ ಅಂದಿನ ನ್ಯಾಯ ವಿಧಾಯಕ ಸಭೆಗೆ ಚುನಾವಣೆ. ಯಶೋಧರಮ್ಮ ಕಾಂಗ್ರೆಸ್ ಅಭ್ಯರ್ಥಿ. ಅವರ ವಿರುದ್ಧ ಧನಿಕ ಕಂಟ್ರಾಕ್ಟರೊಬ್ಬರ ಸ್ಪರ್ಧೆ. ಕಂಟ್ರಾಕ್ಟರರಿಗೆ ಮಿರ್ಜಾರವರ ಸರ್ಕಾರದ ಸವಲತ್ತು. ಆದರೂ ಯಶೋಧರಾಗೆ ಜಯಭೇರಿ.

೧೯೩೮ರ ಶಿವಪುರದ ಧ್ವಜ ಸತ್ಯಾಗ್ರಹ. ಹಳೆಯ ಮೈಸೂರು ಸಂಸ್ಥಾನದಲ್ಲಿ

ನಡೆದ ಮೊದಲ ಸತ್ಯಾಗ್ರಹ. ಸಹಸ್ರಾರು ಜನಸಾಮಾನ್ಯರ ಸಮಾವೇಶ ನಡೆದಿತ್ತು. ಸರ್ಕಾರ ಪ್ರತಿಬಂಧಕಾಜ್ಞೆ ಹಾಕಿತ್ತು. ೮೦೦ಕ್ಕೂ ಮೇಲ್ಪಟ್ಟು ರಿಸರ್ವ್ ಪೋಲೀಸರು ಧ್ವಜಕಟ್ಟೆಯ ಸಮೀಪದಲ್ಲಿ ಘೇರಾಯಿಸಿಕೊಂಡರು. ಶ್ರೀ ಟಿ. ಸಿದ್ದಲಿಂಗಯ್ಯನವರು ಕಾಂಗ್ರೆಸ್ ಅಧ್ಯಕ್ಷರು, ಬೆಳಿಗ್ಗೆ ಎಂಟು ಗಂಟೆಗೆ ಕಾಂಗ್ರೆಸ್ಸಿನ ತ್ರಿವರ್ಣ ಧ್ವಜವನ್ನು ಅವರು ಹಾರಿಸಬೇಕಾದ ಕಾರ್ಯಕ್ರಮ. ಹಿಂದಿನ ದಿನ ರಾತ್ರಿ ಕಾಂಗ್ರೆಸ್ ಕಾರ್ಯಸಮಿತಿಯ ಹಾಗೂ ಮುಖಂಡರ ಸಭೆ. ಪ್ರತಿಬಂಧಕಾಜ್ಞೆಯ ಹಿನ್ನೆಲೆಯಲ್ಲಿ ಪರಿಸ್ಥಿತಿಯ ಪರಿಶೀಲನೆ. ಪ್ರತಿಬಂಧಕಾಜ್ಞೆ ಮೀರಿದರೆ ಗುಂಡು ಹಾರಿಸಬೇಕೆಂದು ಪೋಲೀಸರಿಗೆ ಸೂಚನೆಯೂ ಬಂದಿತ್ತು. ಆದ್ದರಿಂದ ಹಲವು ಮುಖಂಡರು ಅಳುಕಿದರು. ಹತ್ಯಾಕಾಂಡ ತಪ್ಪಿಸಬೇಕೆಂದು ಬಯಸಿದರು. "ಧ್ವಜಾರೋಹಣಕ್ಕೆ ಬದಲಾಗಿ ಖಂಡನಾಸಭೆ ಮಾಡಿಬಿಡೋಣ" ಎಂಬ ಸೂಚನೆ ಕೆಲ ಪುರುಷ ಮುಖಂಡರಿಂದ ಬಂತು. ಆಗ ಸಭೆಯಲ್ಲಿದ್ದ ಮಹಿಳಾ ಸದಸ್ಯರು ಹೇಳಿದರು. "ತೊಟ್ಟ ಸಂಕಲ್ಪವನ್ನು ಶತಾಯಗತಾಯ ಬಿಡಕೂಡದು. ನಿಮಗೆ ಆಗದಿದ್ದರೆ ಮಹಿಳೆಯರಿಗೆ ಬಿಡಿ. ಧ್ವಜವನ್ನು ಹಾರಿಸುತ್ತೇವೆ. ಅದರ ಗೌರವ ಕಾಪಾಡುತ್ತೇವೆ. ಗುಂಡಿನೇಟು ಬಿದ್ದರೆ ನಮಗೆ ಬೀಳಲಿ" ಹಾಗೆ ಹೇಳಿದವರು ಯಶೋಧರಮ್ಮ ಮತ್ತು ಟಿ. ಸುನಂದಮ್ಮ ಇತ್ಯಾದಿ. ಅಲ್ಲಿಗೆ ಚರ್ಚೆ ಮುಕ್ತಾಯವಾಯಿತು. ಆಗ ಮೀನ-ಮೇಷ ಎಣಿಸುತ್ತಿದ್ದ ನಾಯಕರು ಸತ್ಯಾಗ್ರಹದ ಸಂಕಲ್ಪಕ್ಕೆ ಬದ್ಧರಾದರು. ಮಾರನೆಯ ಬೆಳಿಗ್ಗೆ ಕಾರ್ಯಕ್ರಮದಂತೆ ಶ್ರೀ ಟಿ. ಸಿದ್ದಲಿಂಗಯ್ಯನವರು ಧ್ವಜಾರೋಹಣ ಮಾಡಿ ಪ್ರತಿಬಂಧಕಾಜ್ಞೆ ಮೀರಿದರು. ಅವರ ದಸ್ತಗಿರಿ ಆಯಿತು. ನಂತರ ಇತರ ನಾಯಕರುಗಳ ದಸ್ತಗಿರಿ ಆಯಿತು. ಸತ್ಯಾಗ್ರಹ ನಡೆದಷ್ಟು ದಿನವೂ ಅಹೋರಾತ್ರಿ ಧ್ವಜಸ್ತಂಭದ ಬಳಿ ಮಹಿಳಾ ಸ್ವಯಂಸೇವಕರು ಕಾವಲಿದ್ದು ಸತ್ಯಾಗ್ರಹವನ್ನು ಯಶಸ್ವಿಗೊಳಿಸಿದರು. ಯಶೋಧರಾ ತಮ್ಮ ಎರಡು ಪುಟ್ಟ ಮಕ್ಕಳನ್ನೂ ಸಮೀಪದಲ್ಲಿ ಇಟ್ಟುಕೊಂಡು ಧ್ವಜದ ಗೌರವ ಕಾಪಾಡಿದರು. ತುಂಬಿದ ಬಂದೂಕಗಳನ್ನು ಹೊತ್ತ ರಿಸರ್ವ್ ಪೋಲಿಸಿನವರು ಅವರನ್ನು ಸುತ್ತುವರೆದಿದ್ದರು. ಅವರ ದಿಟ್ಟತನ ಜಯಪಡೆಯಿತು.

೧೯೪೨ರ ಚಲೇಜಾವ್ ಚಳವಳಿ. ದಾಸಪ್ಪನವರು ಸೆರೆಮನೆಯಲ್ಲಿದ್ದರೆ ಯಶೋಧರಮ್ಮನವರಿಗೆ ಮನೆಯಲ್ಲೇ ಸೆರೆ. ಅವರ ಚಲನವಲನಗಳ ಬಗ್ಗೆ ಸರ್ಕಾರ ನಿರ್ಬಂಧ ವಿಧಿಸಿತ್ತು. ಅವರ ಮನೆ "ಯಶೋವಿಲಾಸ" ಆಗ ಭೂಗತ ಚಳುವಳಿಯ ಪ್ರಮುಖ ನಿರ್ದೇಶನ ಕೇಂದ್ರ. ಅನೇಕ ಭೂಗತ ಕಾರ್ಯಕರ್ತರಿಗೆ ಯಶೋಧರಮ್ಮನವರಿಂದ ಮಾರ್ಗದರ್ಶನ, ಸ್ಫೂರ್ತಿ ಪಡೆದರು.

೧೯೪೪ರಲ್ಲಿ ಗಾಂಧೀಜೀ ಬಿಡುಗಡೆಯಾದಮೇಲೆ ದಾಸಪ್ಪ ದಂಪತಿಗಳು ಹಲವು ತಿಂಗಳುಗಳ ಕಾಲ ಸೇವಾಗ್ರಾಮದಲ್ಲಿ ಬಾಪೂ ಬಳಿ ಇದ್ದರು. ಆಗ ಗಾಂಧೀಜಿ ಯಶೋಧರಮ್ಮನವರಿಗೆ ರಚನಾತ್ಮಕ ಕಾರ್ಯಕ್ರಮದ ದೀಕ್ಷೆಯನ್ನು ನೀಡಿದರು. ಮೈಸೂರು ಸಂಸ್ಥಾನದಲ್ಲಿ ಕಸ್ತೂರಬಾ ಗಾಂಧೀ ಸ್ಮಾರಕ ಟ್ರಸ್ಟಿನ ಪ್ರತಿನಿಧಿಯನ್ನಾಗಿ ನೇಮಿಸಿದರು. ಆಗಿನಿಂದ ಕೊನೆಯುಸಿರೆಳೆಯುವ ವರೆಗೆ ಯಶೋಧರಮ್ಮನವರು ಗಾಂಧೀಜಿಯವರ ನಿರ್ದೇಶನದಂತೆ ನಿಷ್ಠ ರಚನಾತ್ಮಕ ಕಾರ್ಯಕರ್ತರಾಗಿ ಹೆಂಗಸರ ಮತ್ತು ಮಕ್ಕಳ, ಅದರಲ್ಲೂ ಗ್ರಾಮಾಂತರ ಪ್ರದೇಶದ ಹೆಣ್ಣುಮಕ್ಕಳ. ಅಭ್ಯುದಯಕ್ಕೆ ಅವಿರತ ದುಡಿದರು. ನೂರಾರು ಮಂದಿ ಗ್ರಾಮ ಸೇವಕಿಯರನ್ನು ತರಬೇತು ಮಾಡಿದರು. ಮೂಲೆಗುಂಪಾದ ಗ್ರಾಮಗಳಲ್ಲಿ ಕಸ್ತೂರಬಾ ಗ್ರಾಮಸೇವಾ ಕೇಂದ್ರಗಳನ್ನು ಸ್ಥಾಪಿಸಿದರು. ಈ ಕೇಂದ್ರಗಳಲ್ಲಿ ಬಾಲವಾಡಿ. ಪ್ರಸೂತಿ ಸೇವೆ, ಮಹಿಳೆಯರ ಶಿಕ್ಷಣ, ಗೃಹ ಕೈಗಾರಿಕೆಗಳಲ್ಲಿ ತರಬೇತಿ ಇತ್ಯಾದಿ ಕಾರ್ಯಕ್ರಮಗಳನ್ನು ರೂಪಿಸಿದರು.

೧೯೫೦ರಲ್ಲಿ ಅಂದಿನ ಮೈಸೂರು ಸಂಸ್ಥಾನದ ರಾಜಕಾರಣದಲ್ಲಿ ಸಾಹುಕಾರ್ ಚೆನ್ನಯ್ಯನವರ ಪ್ರಾಬಲ್ಯ ತುಂಬಾ ಇತ್ತು. ಕಾಂಗ್ರೆಸ್ ಕಾರ್ಯಕರ್ತರು ಚೆನ್ನಯ್ಯನವರ ಕಾರ್ಯವಿಧಾನದ ವಿರುದ್ಧ ತಿರುಗಿ ಬಿದ್ದರು. ಮೈಸೂರು ಸಂಸ್ಥಾನದ ಕಾಂಗ್ರೆಸ್ ಅಧ್ಯಕ್ಷ ಪದವಿಗೆ ಚೆನ್ನಯ್ಯನವರ ವಿರುದ್ಧ ತಮ್ಮ ಪರವಾಗಿ ಯಶೋಧಮ್ಮನವರನ್ನು ಕಾರ್ಯಕರ್ತರು ನಿಲ್ಲಿಸಿದರು. ಬೇಲೂರಿನಲ್ಲಿ ಕಾಂಗ್ರೆಸ್ ಅಧಿವೇಶನ ಸಮಾವೇಶಗೊಂಡಿತ್ತು. ಯಶೋಧಮ್ಮನವರಿಗೆ ಆಗ ಕಾಯಿಲೆಯಾಗಿ ಮದ್ರಾಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರೂ ಕಾಂಗ್ರೆಸ್ ಕಾರ್ಯಕರ್ತರ ಕೈಬಿಡಲು ಇಚ್ಛಿಸದೆ ಸ್ಪರ್ಧೆಗೆ ಸಮ್ಮತಿ ನೀಡಿದರು. ಚೆನ್ನಯ್ಯನವರನ್ನು ಸೋಲಿಸಿ ಯಶೋಧಮ್ಮನವರು ಕಾಂಗ್ರೆಸ್ ಅಧ್ಯಕ್ಷರಾದರು. ಅವರೆ ಸಂಸ್ಥಾನ ಕಾಂಗ್ರೆಸ್ಸಿನ ಪ್ರಥಮ ಮಹಿಳಾ ಅಧ್ಯಕ್ಷೆ. ಅವರ ಅಧ್ಯಕ್ಷ ಪದವಿಯ ಅವಧಿಯಲ್ಲಿ ಎ.ಐ.ಸಿ.ಸಿ. ಮೈಸೂರು ಕಾಂಗ್ರೆಸ್ಸಿಗೆ ಪ್ರದೇಶ ಕಾಂಗ್ರೆಸ್‌ನ ಸ್ಥಾನಮಾನವನ್ನು ನೀಡಿತು.

೧೯೫೭ರ ಮಹಾಚುನಾವಣೆಯಲ್ಲಿ ಸ್ಪರ್ಧಿಸುವಂತೆ ಯಶೋಧಮ್ಮನವರ ಮೇಲೆ ಒತ್ತಡ ಬಂದಿತು. ಚುನಾವಣೆಯ ನಂತರ ನಿಜಲಿಂಗಪ್ಪನವರ ಮಂತ್ರಿ ಮಂಡಲದಲ್ಲಿ ಕ್ಯಾಬಿನೆಟ್ ದರ್ಜೆಯ ಸಚಿವರಾದರು. ಸಮಾಜ ಕಲ್ಯಾಣ ಮಂತ್ರಿಯಾಗಿ ನಾಲ್ಕು ವರ್ಷ ದಕ್ಷ ಸೇವೆ ಮಾಡಿದರು. ಮಂತ್ರಿಯಾಗಿ ಅವರು ರೂಪಿಸಿ ಕಾರ್ಯಗತಗೊಳಿಸಿದ ಕೆಲವು ಅಧಿಕೃತ ನೀತಿ ನಿಯಮಗಳನ್ನು ಇತರ ರಾಜ್ಯಗಳೂ ಅನುಸರಿಸಿದವು.

ಯಶೋಧರಾ ಇಲ್ಲಿ ಮಂತ್ರಿಯಾಗಿದ್ದಾಗ ದಾಸಪ್ಪನವರು ದೆಹಲಿಯಲ್ಲಿ ಮಂತ್ರಿ. ಆಫ್ರಿಕಾದಲ್ಲಿನ ಜಾಂಬಿಯಾ ಸ್ವತಂತ್ರವಾದಗ ದಾಸಪ್ಪ ದಂಪತಿಗಳು ಭಾರತದ ಪ್ರತಿನಿಧಿಗಳಾಗಿ ಹೋದರು. ಆಫ್ರಿಕಾದ ಇತರ ದೇಶಗಳಿಗೂ ಭೇಟಿ ಕೊಟ್ಟರು. ಅಲ್ಲಿನ ಅನಾಥಗೃಹ ಒಂದಕ್ಕೆ ಭೇಟಿ ನೀಡಿದರು. ಅಲ್ಲಿನ ನೀಗ್ರೋ ಬಾಲಕರಲ್ಲಿ ಕೆಲವರನ್ನು ದತ್ತು ತೆಗೆದುಕೊಳ್ಳುವುದಾಗಿ ಯಶೋಧರಾ ಹೇಳಿದಾಗ ಅಲ್ಲಿನ ಜನ ಬೆರಗಾದರು. ದೇಶ, ವರ್ಣ, ಜಾತಿಗಳನ್ನು ಮೀರಿದ ವಾತ್ಸಲ್ಯ ಅವರದು.

ರಚನಾತ್ಮಕ ಕಾರ್ಯಕೇಂದ್ರಗಳನ್ನು ಸ್ವಾವಲಂಬಿಯನ್ನಾಗಿ ಮಾಡಬೇಕೆಂಬುದು ಯಶೋಧರಾರವರ ಹೆಬ್ಬಯಕೆ. ಆದ್ದರಿಂದ ಅವರು ಕಸ್ತೂರಿಬಾ ಗ್ರಾಮಸೇವಾ ಕೇಂದ್ರಗಳನ್ನು ಸ್ವಾವಲಂಬಿಗಳನ್ನಾಗಿ ಮಾಡಲು ಬಹುವಾಗಿ ಶ್ರಮಿಸಿದರು. ಅರಸೀಕೆರೆ ಬಳಿ ಕಸ್ತೂರಬಾ ಗ್ರಾಮ ಕಟ್ಟಿದರು. ಅಲ್ಲಿ ಒಂದು ಸಾವಿರಕ್ಕೂ ಮೇಲ್ಪಟ್ಟು ತೆಂಗಿನ ಸಸಿಗಳನ್ನು ಬೆಳಸಿದರು. ಈಗ ಅವೆಲ್ಲವೂ ಫಲ ಬಿಡುವ ಸ್ಥಿತಿಗೆ ಬಂದಿವೆ. ಗಾಂಧೀ ಬದುಕಿದ್ದಾಗಲೇ ಗ್ರಾಮ ಯೋಜನೆಯನ್ನು ತಯಾರಿಸಿ ಅವರ ಆಶೀರ್ವಾದವನ್ನು ಪಡೆದಿದ್ದರು.

ಬಾಪೂರ ಆಶೀರ್ವಾದ ಪಡೆದು ಸ್ವಾವಲಂಬನೆಯ ಆಧಾರದ ಮೇಲೆ ನಿರ್ಮಿಸಿದ ಕಸ್ತೂರಬಾ ಗ್ರಾಮದಲ್ಲಿ ತಮ್ಮ ಅಂತ್ಯ ಸಂಸ್ಕಾರ ಆಗಬೇಕೆಂದು ಯಶೋಧರಾ ಬಯಸಿದ್ದರು. ಅಂತೆಯೇ ಸದ್ದುಗದ್ದಲವಿಲ್ಲದೆ ಕಸ್ತೂರಬಾ ಗ್ರಾಮದಲ್ಲಿ ಅವರ ಅಂತ್ಯ ಕ್ರಿಯೆ ನಡೆಯಿತು.

ಯಶೋಧರಾರವರ ನಿಧನದಿಂದ ನೂರಾರು ರಚನಾತ್ಮಕ ಕಾರ್ಯಕರ್ತರು ತಬ್ಬಲಿಗಳಾದರು.

ಕಾಶ್ಮೀರ....... ೩೨ ನೇಪುಟದಿಂದ

ಕೊಡುವಂತಾಗಲಿ. ಆನಂತರ ಸಂವಿಧಾನದಲ್ಲಿ ಸೂಕ್ತ ತಿದ್ದುಪಡಿಗಳೊಂದಿಗೆ ದೇಶದ ಎಲ್ಲ ೨೫ ರಾಜ್ಯಗಳಿಗೂ ಸ್ವಾಯತ್ತತೆ ದೊರೆಯುವಂತಾಗಲಿ ಮತ್ತು ಭಾರತ ಶಕ್ತಿಯುತ ಗಣರಾಜ್ಯವಾಗಲಿ. ಅಲ್ಲಿಯವರೆಗೆ ಕಾಶ್ಮೀರದ ಡಾ॥ಫಾರೂಖ ಅಬ್ದುಲ್ಲ ಮತ್ತು ಅವರ ಪಕ್ಷ ನಿಷ್ಠೆಯಿಂದ ರಾಜ್ಯದ ಹಿತಾಸಕ್ತಿಯ ಕೆಲಸದಲ್ಲಿ ತೀವ್ರವಾಗಿ ತೊಡಗಿಸಿಕೊಳ್ಳಲಿ. ತಮ್ಮ ರಾಜಕೀಯದ ಬದುಕಿಗಾಗಿ ಕಾಶ್ಮೀರದ ಗುಮ್ಮವನ್ನು ದೇಶದ ಮೇಲೆ ಹರಿಬಿಡುವ ಪ್ರಯತ್ನವನ್ನು ಡಾ॥ ಅಬ್ದುಲ್ಲಾ ತಕ್ಷಣ ನಿಲ್ಲಿಸಲಿ ಮತ್ತು ಕೇಂದ್ರ ಸರ್ಕಾರ ಆ ಗುಮ್ಮನಿಗೆ ಹೆದರದಿರಲಿ.

(ಜನಪದ ಸಂಗತಿಯಿಂದ ಮುಂದುವರೆದುದು)

ಸಮಾಜ ಶಾಸ್ತ್ರಜ್ಞರಿಗೂ, ಮನಶಾಸ್ತ್ರಜ್ಞರಿಗೂ ಹಾಗೂ ಸಮಾಜ ಸೇವಕರಿಗೂ ಇಲ್ಲಿ ಬಹಳಷ್ಟು ಹೊಣೆಗಾರಿಕೆಯಿದೆ. ವಿಷಯದ ಆಳದಲ್ಲಿ ಹೋಗಬೇಕಿವೆ. ಇಂಥ ಕ್ರೋಢೀಕೃತ ವಿಚಾರಣೆ ಪ್ರತಿಯೊಂದು ಅಮಾನವೀಯ ಘಟನೆಗಳ ಬಗ್ಗೆಯೂ ನಡೆಯಬೇಕು, ಕೇವಲ ಪೋಲಿಸ್ ತನಿಖೆ, ಶಿಕ್ಷೆ ಪ್ರಯೋಜನಕಾರಿಯಾಗಲಾರದು. ಅದರಿಂದ ಇಂಥ ಘಟನೆಗಳ ಪುನರಾವರ್ತನೆಯು ಸಂಭವವೇ ಹೆಚ್ಚಾಗುತ್ತದೆ. ನಮ್ಮ ಪ್ರಜಾಸತ್ತಾತ್ಮಕ ರಾಜ್ಯ ಪದ್ಧತಿಗೆ ಅನುಗುಣವಾಗಿ ವಿಚಾರಣಾ ಪದ್ಧತಿಯನ್ನು ಬೆಳೆಸಿಕೊಳ್ಳಬೇಕು ಮತ್ತು ಶೀಘ್ರಗೊಳಿಸಿಕೊಳ್ಳಬೇಕು.

ಮಂಡ್ಯದಲ್ಲಿರುವ ಮೈಸೂರು ಸಕ್ಕರೆ ಕಾರ್ಖಾನೆಯವರು ತಮ್ಮ ಕಾರ್ಖಾನೆಯಿಂದ ಹೊರ ಬರುವ ಒಣಗಿದ ಕಬ್ಬಿನ ಸಿಪ್ಪೆ ಮತ್ತು ಇತರ ತ್ಯಾಜ್ಯ ಪದಾರ್ಥಗಳನ್ನು ಉಪಯೋಗಿಸಿಕೊಂಡು ೧೭ ಕಿಲೋವಾಟ್ ವಿದ್ಯುತ್ ಉತ್ಪಾದಿಸಲು ಯೋಜಿಸಿದ್ದಾರೆ. ಈ ಹೊಸ ವಿದ್ಯುತ್ ಉತ್ಪಾದನೆಯು ಕೆಲಭಾಗವನ್ನು ಸಾರಾಯಿ ತಯಾರಿಸುವ ಘಟಕಕ್ಕೆ ಉಪಯೋಗಿಸಿಕೊಳ್ಳಲು ಬಯಸಿದ್ದಾರೆ. ಆದರೆ ಈ ಮಧ್ಯ ಇಂಥ ಮದ್ಯದ ಘಟಕಗಳನ್ನು ಮೈಸೂರು ಸೇಲ್ಸ್ ಇಂಟರ್‌ನ್ಯಾಶನಲ್‌ನಂಥ ಸಂಸ್ಥೆಗಳಿಗೆ ವರ್ಗಾಯಿಸಬೇಕೆಂಬ ಬೇಡಿಕೆ ಜಿಲ್ಲೆಯ ಇತರ ಕೆಲ ಸಕ್ಕರೆ ಕಾರ್ಖಾನೆಗಳಿಂದ ಬಂದಿದೆ. ಇದಕ್ಕೆ ಕಾರಣ ಗೊತ್ತಾಗಲಿಲ್ಲ ಆದರೆ ಮೈಸೂರು ಕಂಪನಿಯ ಕಾರ್ಮಿಕರು ಈ ಬೇಡಿಕೆಯನ್ನು ವಿರೋಧಿಸಿದ್ದಾರೆ. ಅವರ ಪ್ರಕಾರ ತಮ್ಮ ಕಾರ್ಖಾನೆಯು ಲಾಭಪ್ರದವಾಗಿ ನಡೆಯಬೇಕಾದರೆ ಸಾರಾಯಿ ತಯಾರಿಕಾ ಘಟಕ ಅವರ ಕಂಪನಿಯಲ್ಲಿಯೇ ಇರಬೇಕು. ಇಲ್ಲಿ ನಾವು ಗಮನಿಸಬೇಕಾದ ಮುಖ್ಯ ಸಂಗತಿಯೊಂದರೆ ಮದ್ಯ ಅಥವಾ ಸಾರಾಯಿಯನ್ನು ವಾಣಿಜ್ಯ ವಸ್ತುವನ್ನಾಗಿ ಮಾಡಿ ಅದಕ್ಕೆ ಸಾಮಾಜಿಕ ಮಾನ್ಯತೆಯನ್ನು ತಂದುಕೊಡುವ ಪ್ರಯತ್ನ ಹಾಗೂ ಸಕ್ಕರೆ ಕಾರ್ಖಾನೆಯ ಉಳುವಿಗೆ ಮದ್ಯ ಒಂದು ಅಗತ್ಯ ವಸ್ತುವಾಗಿ ಪರಿಣಮಿಸುವಂಥ ಪರಿಸ್ಥಿತಿಗೆ ನಮ್ಮ ದೇಶದ ಆರ್ಥಿಕ ಸ್ಥಿತಿ ಬಂದು ಮುಟ್ಟಿರುವುದು. ಇಂದು ಸಕ್ಕರೆಯ ಉತ್ಪಾದನೆಯೊಂದನ್ನೇ ನೆಚ್ಚಿಕೊಂಡು ಬದುಕಲಾರದ ಸಕ್ಕರೆ ಕಂಪನಿಗಳ ಸ್ಥಿತಿಗೆ ನಮ್ಮ ಇಂದಿನ ಮುಕ್ತ ಮಾರುಕಟ್ಟೆಯ ನೀತಿ ಹಾಗೂ ವಿಶ್ವೀಕರಣದ ನೀತಿ ಕಾರಣವಾಗಿವೆ. ಕಾರ್ಮಿಕರು ತಾವು ದುಡಿದ ಹಣದಲ್ಲಿಯೇ ಕುಡಿದು ಸತ್ತುಹೋದ ಅವರ ಹೆಣಗಳ ಮೇಲೆ ಅಭಿವೃದ್ಧಿಯ ಸೌಧವನ್ನು ಕಟ್ಟುವ ಸರಕಾರದ ನೀತಿ ಜಾಣತನದ್ದೇ ಅಥವಾ ದಡ್ಡತನದ್ದೇ? ಆಲೋಚಿಸಿ.

— ಸು. ಕೌ.

ತಾಯಿ ಕಸ್ತೂರಬಾ ಎಲ್ಲರ ಬಾ

-ವಿನೋಬಾ

ಒಂದು ಸಲ ಬಾಪೂ ನನ್ನನ್ನು ಕೇಳಿದರು. "ನಿನ್ನಿಂದ ಬಾ ಗೀತೆ ಕಲಿಯ ಬಯಸಿದ್ದಾಳೆ. ನಿನಗೆ ಸಮಯ ಕೊಡಲು ಸಾಧ್ಯವೇ? ೧೫-೨೦ ನಿಮಿಷ ಸಾಕಾಗಬಹುದು."

"ಆಗಲಿ. ನಾನು ೨೪ ನಿಮಿಷ ಕಲಿಸುವೆ" ಎಂದು ಹೇಳಿದೆ.

"೨೪ ನಿಮಿಷಗಳೇ ಏಕೆ?" ಬಾಪು ಕೇಳಿದರು.

ಸಾಮಾನ್ಯವಾಗಿ ಧ್ಯಾನ ೨೪ ನಿಮಿಷ ಸ್ಥಿರವಾಗಿರುತ್ತದೆ. ಅಷ್ಟು ಸಮಯದಲ್ಲಿ ಧ್ಯಾನ ಘಟಿತವಾಗುತ್ತದೆ. ಆದ್ದರಿಂದ ಅದನ್ನು ಘಟಿಕಾ ಎನ್ನುತ್ತಾರೆ. ಇದನ್ನು ಹಿರಿಯರು ಹೇಳಿದ್ದು.

ನಾನು ಬಾಪೂಗೆ ಉತ್ತರಿಸಿದೆ, "೨೪ ನಿಮಿಷಗಳದು ಒಂದು ಘಟಿಕಾ ಆಗುತ್ತದಾದ್ದರಿಂದ ಅಷ್ಟು ಸಮಯ ಕಲಿಸುತ್ತೇನೆ."

ಈ ರೀತಿ ಪ್ರತಿದಿನ ೨೪ ನಿಮಿಷಗಳ ತರಗತಿ ಪ್ರಾರಂಭವಾಯಿತು. ದಿನಾಲು ಸಮಯಕ್ಕೆ ಸರಿಯಾಗಿ ಹಾಜರಾಗುತ್ತಿದೆ. ಉಚ್ಚಾರಣೆ ಕಲಿಸಲು ಪ್ರಾರಂಭಿಸಿದೆ. ನಂತರ ಅರ್ಥ ಕಲಿಸಲು ಪ್ರಾರಂಭಿಸಿದೆ.

ಮೊದಲನೇ ಅಧ್ಯಾಯದಿಂದ ಪ್ರಾರಂಭಿಸಲಿಲ್ಲ. ಪ್ರಥಮವಾಗಿ ೧೨ ನೇ ಅಧ್ಯಾಯ ತೆಗೆದುಕೊಂಡೆ. ಬಾಪೂ ಇದರ ಕಾರಣವನ್ನೂ ಕೇಳಿದರು. ನಾನು ಹೇಳಿದೆ, "ಈಗ ಪರಿಸ್ಥಿತಿಯೆಲ್ಲವೂ ಅನಿಶ್ಚಿತವಾಗಿದೆ. ಈ ಅನಿತ್ಯ ಸಂಸಾರದಲ್ಲಿ ಶಿಕ್ಷಣ ಕಾರ್ಯ ಎಲ್ಲಿಯವರೆಗೆ ನಡೆದೀತೊ ಗೊತ್ತಿಲ್ಲ. ಇಂಥ ಸ್ಥಿತಿಯಲ್ಲಿ ಮೊದಲನೇ ಅಧ್ಯಾಯವನ್ನು ಕೈಗೆತ್ತಿಕೊಂಡು ಕೌರವ - ಪಾಂಡವರ ಹೆಸರುಗಳನ್ನು ಏಕೆ ಬಾಯಿಪಾಠ ಮಾಡಬೇಕು? ಆದ್ದರಿಂದ ೧೨ ನೇ ಅಧ್ಯಾಯ ಎತ್ತಿಕೊಂಡೆ. ಅದರಲ್ಲಿ ಇಪ್ಪತ್ತೇ ಶ್ಲೋಕಗಳಿವೆ, ಅದು ಸರಳ ಕೂಡ ಮತ್ತು ಭಕ್ತಿಯ ಅಧ್ಯಾಯವು ಕೂಡ."

"ನಿನ್ನ ಮಾತು ಪೂರ್ತಿ ಸರಿ" ಎಂದು ಬಾಪೂ ಹೇಳುತ್ತ ಮುಂದುವರಿಸಿದರು, "ಗೀತೆಯ ಪ್ರಾರಂಭದ ಭಾಗ ಬಹಳೇ ಗೊಂದಲಮಯವಾಗಿದೆ. ಸಗುಣ, ನಿರ್ಗುಣ, ಇದನ್ನು ಮಾಡಬೇಕು, ಅದನ್ನು ಮಾಡಬಾರದು ಇತ್ಯಾದಿ ಎಲ್ಲವೂ ಅದರಲ್ಲಿ ಬರುತ್ತದೆ. ಅಲ್ಲಿ ಒಬ್ಬ ಟೀಕಾಕಾರ ಇನ್ನೊಬ್ಬ ಟೀಕಾಕಾರನೊಂದಿಗೆ ಸಹಮತನಾಗುವುದಿಲ್ಲ. ಪ್ರಾರಂಭದ ಕಾಡನ್ನು ದಾಟಿದ ಮೇಲೆ ಸರಳ ದಾರಿ ಬರುತ್ತದೆ. ಹನ್ನೆರಡನೇ ಅಧ್ಯಾಯದಲ್ಲಿ 'ಅದ್ವೇಷ್ಟಾ ಸರ್ವಭೂತಾನಾಂ

ಮೈತ್ರಃ ಕರುಣ ಏವಚ' (ದಯೆ, ಮೈತ್ರಿ ಹೊಂದಿರುವ ಮನಸ್ಸು ಯಾರನ್ನೂ ದ್ವೇಷಿಸುವುದಿಲ್ಲ.) ಈ ಶ್ಲೋಕ ಸರಳವಾಗಿದೆ." ನಂತರ ತಾವು ತಯಾರಿಸಿದ ವಿವಾಹ ಸಂಹಿತೆಯಲ್ಲಿ ಕೂಡ ೧೨ ನೇ ಅಧ್ಯಾಯವನ್ನು ಬಾಪೂ ಸೇರಿಸಿದರು.

ಬಾ ಮತ್ತು ಬಾಪೂ ಇವರ ಸಂಬಂಧ ಅವರ್ಣನೀಯವಾಗಿತ್ತೆಂದು ಹೇಳ ಬಹುದು. ಪತಿ-ಪತ್ನಿಯರ ವಿವಾಹದೊಂದಿಗೆ ವಸಿಷ್ಠ ಮತ್ತು ಅರುಂಧತಿಯ ದರ್ಶನ ಮಾಡುವ ವಿಧಿಯನ್ನು ನಮ್ಮ ಶಾಸ್ತ್ರಕಾರರು ಹೇಳಿದ್ದಾರೆ. ಆಕಾಶದಲ್ಲಿ ಈ ಎರಡು ನಕ್ಷತ್ರಗಳು ಜೊತೆಯಾಗಿವೆ. ಸಪ್ತಋಷಿಗಳ ನಕ್ಷತ್ರಗಳಲ್ಲಿ ಉಳಿದ ಆರು ಋಷಿಗಳ ಜೊತೆ ಅವರ ಪತ್ನಿಯರಿಲ್ಲ, ಆದರೆ ವಶಿಷ್ಠ ಮತ್ತು ಅರುಂಧತಿ ಒಟ್ಟಿಗಿದ್ದಾರೆ. ಪತಿ–ಪತ್ನಿಯರಿಗೆ ಅವರ ದರ್ಶನ ಮಾಡಿಸುತ್ತಾ, "ನಿಮ್ಮ ಜೀವನ ನಿರ್ಮಲ, ಅನುಶಾಸಿತ ಹಾಗೂ ವಸಿಷ್ಠ – ಅರುಂಧತಿಯರಂತೆ ಅದ್ವಿತೀಯ ಜೋಡಿಯಂತಾಗಿರಲಿ" ಎಂದು ಹೇಳುತ್ತಾರೆ. ಅ–ರುಂಧತಿ ಎಂದರೆ ಪತಿಯ ಮಾರ್ಗದಲ್ಲಿ ರೋಧ–ಅವರೋಧ ಮಾಡದಂಥವಳು. ಪತಿ ಎತ್ತರಕ್ಕೆ ಏರಬಯಸಿದರೆ ಅವಳೂ ಎತ್ತರಕ್ಕೆ ಏರುವಂಥವಳಾಗಿರಬೇಕು. ಬಾಪೂ ಜೇಲಿಗೆ ಹೋದರೆ ಬಾ ಕೂಡ ಜೇಲಿಗೆ ಹೋಗುತ್ತಿದ್ದರು. ಬಾಪೂ ಸತ್ಯಾಗ್ರಹ ಮಾಡಿದರೆ ಬಾ ಕೂಡ ಸತ್ಯಾಗ್ರಹ ಮಾಡುತ್ತಿದ್ದರು. ಬಾಪೂ ಏನೇ ಮಾಡಲಿ ಅವರೊಂದಿಗೆ ಬಾ ಇರುತ್ತಿದ್ದರು. ಅವರ ಒಳ್ಳೆಯ ಕೆಲಸ ಗಳಲ್ಲಿ ಬಾ ತಡೆಯುಂಟು ಮಾಡಲಿಲ್ಲ.

ವಶಿಷ್ಠ – ಅರುಂಧತಿಯ ಆದರ್ಶ ಬಹಳ ಕಡಮೆ ಜನರ ಜೀವನದಲ್ಲಿ ಕಂಡು ಬರುತ್ತದೆ. ಇಂಥ ಉದಾಹರಣೆ ಮಹಾರಾಷ್ಟ್ರದ ಏಕನಾಥ ಮಹಾ ರಾಜರದಿದೆ. ಮದುವೆಯ ಸಮಯದಲ್ಲಿ ಇಬ್ಬರೂ ಕೈಹಿಡಿದಾದ ಮೇಲೆ ಸಾಯು ವುದಕ್ಕೂ ಇಬ್ಬರೂ ಒಟ್ಟಿಗೆ ಹೊರಟರು. ಇಂಥ ಇನ್ನೂ ಅನೇಕ ಉತ್ತಮ ಉದಾಹರಣೆಗಳಿವೆ.

ಇದೇ ಯುಗದಲ್ಲಿ ರಾಮಕೃಷ್ಣ ಪರಮಹಂಸರ ಉದಾಹರಣೆಯಿದೆ. ರಾಮಕೃಷ್ಣರು ದಿನಾಲು ಶಕ್ತಿಮಾತೆಯ ಪೂಜೆ ಮಾಡುತ್ತಿದ್ದರು. ವಿವಾಹದ ನಂತರ ರಾಮಕೃಷ್ಣರು ತಮ್ಮ ಪತ್ನಿ ಶಾರದಾದೇವಿಯನ್ನು ಮಣೆ ಮೇಲೆ ಕೂರಿಸಿ ಅವರ ತಲೆಯ ಮೇಲೆ ಹೂ ಇರಿಸಿದರು, ಆರತಿ ಮಾಡಿದರು ಮತ್ತು ನಮಸ್ಕಾರ ಮಾಡುತ್ತ ಹೇಳಿದರು, "ಇಂದಿನಿಂದ ನೀ ನನ್ನ ತಾಯಿ ಯಾದೆ. ನೀನು ನನಗಾಗಿ ಭಗವತಿಯಾಗು." ಅಂದಿನಿಂದ ಅವರು ಶಾರದಾದೇವಿ ಯಾದರು. ಬಾಪೂ ಈ ರೀತಿ ತಮ್ಮ ಪತ್ನಿಗೆ ಹೂ, ಗಂಧ ಇತ್ಯಾದಿ ಹಾಕದಿದ್ದರೂ ಅವರಿಗೆ 'ಬಾ' ಎಂಬ ಹೆಸರನಿತ್ತರು. 'ಬಾ' ಅಂದರೇನೆ ತಾಯಿ.

ತದನುಸಾರವಾಗಿ ವ್ಯವಹರಿಸತೊಡಗಿದರು. ಇದು ಈ ಯುಗದ ಸುಂದರ ಉದಾಹರಣೆ.

'ಬಾ' ರವರನ್ನು ಬಾಪೂ ತಾಯಿಯೆಂದಾಗಿ ಎಣಿಸಿದ್ದರು, ಪತ್ನಿಯನ್ನು ತಾಯಿಯೆಂದೆಣಿಸಿ ವ್ಯವಹರಿಸುವುದು ದೊಡ್ಡ ಆದರ್ಶವೇ ಸರಿ. ಅನುಭವದಿಂದ ಬಾಪೂ ಕೊಟ್ಟ ವ್ರತವಿಚಾರವಿದು. ಅವರು ತಮ್ಮ 'ಮಂಗಳ ಪ್ರಭಾತ' ಪುಸ್ತಕದಲ್ಲಿ ಏಕಾದಶ ವ್ರತದ ವಿವರಣೆ ಕೊಡುವಾಗ ಈ ಮಾತನ್ನು ಹೇಳಿದ್ದಾರೆ. ಇಂಥ ವ್ರತದಿಂದ ಮನೋವೃತ್ತಿ ಒಮ್ಮೆಲೆ ಉನ್ನತಿ ಹೊಂದಿ ಜೀವನ ನಿರ್ಮಲವಾಗುವುದು.

ಭಾಗವತದಲ್ಲಿ ಒಂದು ವಚನವಿದೆ. **ಸಹಾನುಭೂತಿಃ ಸಕಲಾನುಭೂತಿಃ.** ವಿಶ್ವದ ಅನುಭೂತಿ ಅವನ ಎಲ್ಲ ಕಲೆಗಳೊಂದಿಗೆ ಆಗಬೇಕು. ಸಾಬರಮತಿ ಆಶ್ರಮದ ಮಾತು. ಆ ದಿನಗಳಲ್ಲಿ ನಾ ಅಧ್ಯಾಪಕನ ಕೆಲಸ ಮಾಡುತಲಿದ್ದೆ. ಚಂದ್ರಗ್ರಹಣವಿತ್ತು. ಆ ದಿನ ಬಾ ಮತ್ತು ಇನ್ನಿತರರು ಹಳೇ ರೀತಿಯಲ್ಲಿ ಸ್ನಾನ, ಉಪವಾಸ ಇತ್ಯಾದಿ ಮಾಡಿದರು. ಹುಡುಗರು ಹೊಸ ಪೀಳಿಗೆಯವರಾಗಿದ್ದರು. ಅವರು ಬಾಗೆ ಹಾಸ್ಯ ಮಾಡಲಾರಂಭಿಸಿದರು. ಪೃಥ್ವೀ ಮತ್ತು ಸೂರ್ಯನ ಮಧ್ಯ ಚಂದ್ರ ಬಂದರೇನಾಯಿತು? ಇದರಲ್ಲಿ ಸ್ನಾನ ಮತ್ತು ಉಪವಾಸದ ಸಂಬಂಧವೇನೆಂದು ನನ್ನನ್ನೂ ಕೇಳಿದರು. ಆ ಸಮಯದಲ್ಲಿ ನಾನೇನೂ ಮಾತನಾಡಲಿಲ್ಲ ಆದರೆ ಎರಡು–ಮೂರು ದಿನಗಳ ನಂತರ ನಾನು ಹುಡುಗರನ್ನು ಸ್ನಾನಕ್ಕಾಗಿ ನದಿಗೆ ಕರೆದುಕೊಂಡು ಹೋದೆ. ಆಗ ನಾನು ಒಬ್ಬ ಬಾಲಕನನ್ನು ಹಿಡಿದು ಮುಳುಗು ಹಾಕಿಸಲು ಪ್ರಾರಂಭಿಸಿದೆ. ಪಾಪ, ಅವನು ಹೆದರಿದ. ಬೇರೆಯವರೂ ಇದನ್ನು ನೋಡುತ್ತಿದ್ದರು. "ಏಕೆ ಹೀಗೆ ಗಾಬರಿಯಾಗಿದ್ದೀರಿ? ಏನಾಗಿದೆ? ಮೂಗು ಮತ್ತು ಹೊರಗಿನ ಆಕಾಶ ಈ ಎರಡರ ಮಧ್ಯ ನೀರು ಹೋಗಿದೆಯಷ್ಟೆ!" ಎಂದು ಹೇಳಿದೆ. ಆಗ ಎಲ್ಲರೂ ಅರ್ಥ ಮಾಡಿಕೊಂಡರು. ಸಾರಾಂಶವಿಷ್ಟೆ : ಸಹಾನುಭೂತಿ ಎಂಬ ವಸ್ತುವಿದೆ. ಅದು ವಿಶ್ವದ ಘಟನೆಗಳೊಂದಿಗೆ ಸೇರಬೇಕು. 'ಬಾ' ಅವರದು ಭಾವನೆಯಿತ್ತು. ಭಾವನೆಯನ್ನು ಕುರಿತು ಯಾವಾಗಲೂ ಹಾಸ್ಯ ಮಾಡುವುದು ತರವಲ್ಲ.

ಒಂದು ಸಲ 'ಬಾ' ಅವರಿಗೆ ಗಂಭೀರವಾಗಿ ಕಾಯಿಲೆಯಾದಾಗ ಡಾಕ್ಟರರು ಶಕ್ತಿಗಾಗಿ ಮೊಟ್ಟೆ ತಿನ್ನಬೇಕೆಂಬ ಸಲಹೆ ಕೊಟ್ಟರು. ಬಾ ಮೊಟ್ಟೆ ತಿನ್ನಲು ಒಪ್ಪುವುದಿಲ್ಲವೆಂಬುದು ಡಾಕ್ಟರರಿಗೆ ಗೊತ್ತಿತ್ತು, ಆದ್ದರಿಂದ ಅವರು ನಿರ್ಬೀಜ ಮೊಟ್ಟೆಯನ್ನು ಶಿಫಾರಸು ಮಾಡಿದರು. ನಿರ್ಬೀಜ ಮೊಟ್ಟೆಯನ್ನು

ತಿನ್ನುವುದು ಅಹಿಂಸೆಯ ದೃಷ್ಟಿಯಿಂದ ತಪ್ಪಾಗಲಾರದೆಂದು ಅಭಿಪ್ರಾಯಪಟ್ಟರು. ಆದರೂ ಕೂಡ ಬಾ ಅಂದರು, "ವಿನೋಬಾರನ್ನು ಕೇಳಿ. ಅವರು ಏನು ಸಲಹೆ ಕೊಡುತ್ತಾರೋ ನೋಡೋಣ." ಆಗ ಅವರು ನನ್ನನ್ನು ಕೇಳಿದಾಗ ನಿರ್ಬೀಜ ಮೊಟ್ಟೆ ಫಲಿತಗೊಳ್ಳದೇ ಹೋದರೂ ಸಹ ಅದು ವಿಕಾರಮೂಲವಾಗಿದೆ ಎಂದು ಹೇಳಿದೆ. ಆದ್ದರಿಂದ ಅಹಿಂಸೆಯ ದೃಷ್ಟಿಯಿಂದ ಅದನ್ನು ತಿನ್ನುವುದು ತಪ್ಪಾಗ ದಿದ್ದರೂ ಆಧ್ಯಾತ್ಮಿಕ ದೃಷ್ಟಿಯಿಂದ ತೆಗೆದುಕೊಳ್ಳುವುದು ತಪ್ಪು. ಬಾ ನನ್ನ ಉತ್ತರವನ್ನು ಕೇಳಿದರು ಮತ್ತು ನಿರ್ಬೀಜ ಮೊಟ್ಟೆಯನ್ನೂ ತಿನ್ನಬಾರದೆಂದು ತೀರ್ಮಾನಿಸಿದರು.

ಬಾ ರ ಕೊನೆಯ ಕಾಯಿಲೆ. ಕೆಮ್ಮು ಮತ್ತು ದಮ್ಮಿನಿಂದ ಶರೀರ ದುರ್ಬಲ ವಾಗಿತ್ತು. ರಾತ್ರಿಯ ಮೂರು-ಮೂರೂವರೆ ಗಂಟೆಯಾಗಿರಬಹುದು. ಕಾಯಿಲೆ ಉಲ್ಬಣಗೊಂಡಿತು. ಉಸಿರಿನ ಎಳೆದಾಟ ಜೋರಾಗಿತ್ತು. ಇಂಥ ಸ್ಥಿತಿಯಲ್ಲಿ ಸೂರದಾಸರ ಭಜನೆ ಹಾಡತೊಡಗಿದರು.

ಹೇ ಗೋವಿಂದ, ರಾಖೋ ಶರಣ
ಅಬ ತೋ ಜೀವನ ಹಾರೇ

ಇಷ್ಟರಲ್ಲಿ ಸುಶೀಲಾ ಬಹೆನ್ ಬಂದರು. ಅವರು ನಾಡಿ ನೋಡಿ ಬಾ ಗೆ ಹೇಳಿದರು, "ನಮಗೂ ಭಜನೆ ಮಾಡಲು ಹೇಳಿರಲ್ಲ! ನೀವು ಹೇಳುವ ಶ್ರಮ ವಹಿಸಬೇಡಿ," ಬಾ ಉತ್ತರಿಸಿದರು. ಯಾವ ಯೋಚನೆ ಇಲ್ಲ. ದೇವರ ಸ್ಮರಣೆಯಿಂದ ಶ್ರಮ ಆಗುತ್ತದೇನು? ನಿಮಗೇ ಹಾಡಲು ಹೇಳುತ್ತಿದ್ದೆ. ಆದರೆ ಈಗ ನನಗೇ ಹಾಡುವ ಇಚ್ಛೆಯಾಗಿದೆ. ಅದರಿಂದ ನನಗೆ ನೆಮ್ಮದಿ ಅನಿಸುತ್ತದೆ."

ಇಷ್ಟನ್ನೇ ನಾವು ಕಲಿತುಕೊಂಡರೂ ಸಾಕು. ನಮ್ಮ ಜನ್ಮ ಸಾರ್ಥಕಗೊಳು ವುದು.

★

(ಅನು : ಸು.ಕೌ.)

ಓದುಗರಲ್ಲಿ ಮತ್ತು ಲೇಖಕರಲ್ಲಿ ಅರಿಕೆ.

ಜನಪದ ವಿಚಾರಲ್ಲಿ ಪ್ರಕಟಗೊಂಡಿರುವ ಲೇಖನಗಳಲ್ಲಿಯ ವಿಚಾರಗಳ ಬಗ್ಗೆ ಓದುಗರು ತಮ್ಮ ಅನಿಸಿಕೆ, ಅಭಿಪ್ರಾಯ ಇತ್ಯಾದಿಗಳನ್ನು ತಿಳಿಸಬೇಕಾಗಿ ಕೋರಿಕೆ. ಅವುಗಳನ್ನು ಪ್ರಕಟಿಸ ಲಾಗುವುದು.

ಲೇಖಕರು ಸ್ವಂತ ವೈಚಾರಿಕ ಕೃತಿಗಳನ್ನೂ, ಅನುಮತಿ ಪಡೆದ ಅನುವಾದಿತ ಕೃತಿಗಳನ್ನೂ ಪ್ರಕಟಣೆಗಾಗಿ ಕಳುಹಿಸಲು ಕೋರಿದೆ.

ಸಮಯದ ನಿರ್ವಹಣೆಯಲ್ಲಿ ಬಲಮೆದುಳಿನ ಪಾತ್ರ

-ಎನ್. ಸಿ. ಶ್ರೀಧರನ್

ಸಮಯದ ನಿರ್ವಹಣೆಯಲ್ಲಿ ಯಶಸ್ಸನ್ನು ಪಡೆಯುವ ಕ್ರಮ ಮನಸ್ಸನ್ನು ಅವಲಂಬಿಸಿದೆಯೇ ಹೊರತು ಯಾವುದೋ ಒಂದು ಪದ್ಧತಿಯನ್ನು ಆಧರಿಸಿರುವುದಿಲ್ಲ. ಕೆಲವೇ ಕೆಲ ಜನರು ಸಮಯವನ್ನು ಚೆನ್ನಾಗಿ ನಿರ್ವಹಿಸಲು ಏಕೆ ಸಮರ್ಥರಾಗುತ್ತಾರೆ ಎಂಬುದನ್ನು ತಿಳಿಯಬೇಕಾದರೆ ನಮ್ಮ ಜೀವನದಲ್ಲಿ ನಾವು ಇರಿಸಿಕೊಂಡಿರುವ ಎಲ್ಲ ಗುರಿಗಳ ಹಾಗೂ ಆಕಾಂಕ್ಷೆಗಳ ಮೂಲ ಎಲ್ಲಿದೆ ಎಂಬುದನ್ನು ಗುರುತಿಸುವುದು ಅಗತ್ಯ. ಇದಕ್ಕಾಗಿ ನಾವು ಮನುಷ್ಯನಲ್ಲಿರುವ ಮೆದುಳಿನ ಕಾರ್ಯವಿಧಾನವನ್ನು ತಿಳಿಯಬೇಕಾದದ್ದು ಮುಖ್ಯ. ಮನುಷ್ಯನ ಮೆದುಳಿನಲ್ಲಿ ಎರಡು ಭಾಗಗಳಿವೆ. ಎಡಭಾಗ ಮತ್ತು ಬಲಭಾಗ. ಶೇಕಡಾ ೯೫ ರಷ್ಟು ಜನರಲ್ಲಿ ಎಡಭಾಗದ ಮೆದುಳೇ ಹೆಸರುಗಳನ್ನು ಜ್ಞಾಪಕದಲ್ಲಿರಿಸಿಕೊಳ್ಳುತ್ತದೆ, ಅಂಕಿಗಳನ್ನು ಕೂಡಿ ಕಳೆಯುತ್ತದೆ, ಕೆಲಸವನ್ನು ತರ್ಕಬದ್ಧವಾಗಿಯೂ, ಸಾತತ್ಯಪೂರ್ಣವಾಗಿಯೂ ಮಾಡುವುದನ್ನು ಸೂಚಿಸುತ್ತದೆ. ಇನ್ನು ಬಲಭಾಗದ ಮೆದುಳು ಭಾವನೆಗಳ ನಿರ್ಮಾಣ, ಕನಸಗಳ ಕಟ್ಟುವಿಕೆ, ಕಲ್ಪನೆಗಳ ಗರಿಗೆದರಿಸುವಿಕೆ ಇತ್ಯಾದಿ ಕೆಲಸಗಳನ್ನು ಮಾಡತ್ತದೆ.

ಎಡಭಾಗದ ಮೆದುಳು ಭಾಷಾ ಕೌಶಲದಲ್ಲಿ ತೊಡಗುತ್ತದೆ, ಪೂರ್ವಾಪರ ಆಲೋಚನೆ ಮಾಡುತ್ತದೆ, ಒಂದಾದ ನಂತರ ಒಂದು ಮಾಹಿತಿಯನ್ನು ಸಾಲಾಗಿ ಅಭಿಕ್ರಮಿಸುತ್ತದೆ. ಅದು ತರ್ಕಬದ್ಧ ಮತ್ತು ಮಾತಗಾರ ಕೂಡ.

ಬಲಭಾಗದ ಮೆದುಳು ಪ್ರೇರಣೆ ಕೊಡುವಂಥಾದ್ದು. ಆ ಪ್ರೇರಣೆ ಪಾವಿತ್ರ್ಯಾತ್ಮಕವಾಗಿದೆ. ಆದರೆ ತುಂಡು-ತುಂಡಾಗಿ ಇರುವಂಥದು, ಈ ಕಾಲ್ಪನಿಕ ಮತ್ತು ಕ್ರಿಯಾತ್ಮಕ ಅಂಶವೇ ಕನಸುಗಾರಿಕೆಗೆ ಹೊಣೆಯಾಗಿರುತ್ತದೆ. ಮೆದುಳಿನ ಈ ಗುಣವನ್ನು ನಾವು ತಿಳಿದೊಡನೆಯೇ ಸಮಯವನ್ನು ಪರಿಣಾಮಕಾರಿಯಾಗಿ ಉಪಯೋಗಿಸಿಕೊಂಡು ಯಶಸ್ವಿಯಾದ ವ್ಯಕ್ತಿಯ ಮನಸ್ಸಿನಲ್ಲಿ ನಡೆಯುವುದನ್ನು ಅರ್ಥೈಸಿಕೊಳ್ಳುವುದು ಸುಲಭ. ನಿಜಹೇಳಬೇಕೆಂದರೆ ಸಮಯದ ನಿರ್ವಹಣೆಎಂಬುದೇ ಇಲ್ಲ. ಭಾವನಾತ್ಮಕ ಬದ್ಧತೆಯ ಮೂಲಕ ಸ್ವಸಾಮರ್ಥ್ಯವನ್ನು ಪಡೆಯುವುದಕ್ಕಾಗಿ ಸ್ವಯಂ ನಿರ್ವಹಣೆಯೇ ಇಲ್ಲಿ ಮುಖ್ಯವಾಗಿದೆ. ಇಟ್ಟುಕೊಳ್ಳಲಾದ ಗುರಿಯ ಬಗ್ಗೆ ತೀವ್ರತಮವಾದ ಭಾವನೆಯನ್ನು ಹೊಂದಿರುವ ಯಾವುದೇ ವ್ಯಕ್ತಿಯಾಗಿರಲಿ ಅವನು ಅದನ್ನು ಈಡೇರಿಸಿಕೊಳ್ಳುವುದಕ್ಕಾಗಿ ಬೇಕಾದ ಆದ್ಯತೆಗಳನ್ನು ಗುರುತಿಸಿಕೊಳ್ಳುವಲ್ಲಿ ಸಫಲನಾಗುತ್ತಾನೆ. ಅಷ್ಟೇ ಅಲ್ಲ, ಗುರಿಯ ಈಡೇರಿಕೆಯ ಪ್ರಯತ್ನದ

ಸಂದರ್ಭದಲ್ಲಿ ಉಂಟಾಗಬಹುದಾದ ನೋವುಗಳನ್ನು ಮತ್ತು ಬರಬಹುದಾದ ಇತರೆ ಘಟನೆಗಳನ್ನು ತಡೆಯಬಲ್ಲವನಾಗಿರುತ್ತಾನೆ.

ಗುರಿಯನ್ನು ಬಲಭಾಗದ ಮೆದುಳಿಗೆ ವರ್ಗಾಂತರಿಸುವುದಕ್ಕಾಗಿ ಅದರ ಊಹಾಶಕ್ತಿಯ ಕೌಶಲವನ್ನು ಉಪಯೋಗಿಸಿಕೊಳ್ಳಬೇಕು. ಸಮಯದ ನಿರ್ವಹಣೆಯ ಪ್ರಯತ್ನ ಮಾಡುವ ಮೊದಲು ಮನಸ್ಸಿನಲ್ಲಿರುವ ಗುರಿಯನ್ನು ಕುರಿತ ಚಿತ್ರವನ್ನು ಹೊಂದುತ್ತಾ ಮುನ್ನಡೆಯಬೇಕು. ತನ್ನ ಗುರಿಯನ್ನು ಭಾವನಾತ್ಮಕ ಸಂಬಂಧಗಳೊಂದಿಗೆ ಊಹಿಸಿಕೊಳ್ಳಬೇಕು. ಅದನ್ನು ಬೇರೆಯವರು ಕನಸಿನ ಲೋಕವೆಂದೂ ಕರೆಯಬಹುದು. ಆದರೆ ಎಲ್ಲ ಶೋಧನೆಗಳು ಯಾರೊಬ್ಬರ ಕನಸಿನ ಲೋಕದ ಸೃಷ್ಟಿಯೇ ಅಲ್ಲವೆ? ಯಾವಾಗ ಗುರಿಯು ಭವಿಷ್ಯದ ಪ್ರಖರ ಚಿತ್ರದ ಮೂಲಕ ಮನಸ್ಸಿನಲ್ಲಿ ಮೂಡುವುದೋ ಆವಾಗ ವ್ಯಕ್ತಿಯು ಬಹಳಷ್ಟು ಭಾವನಾವಶನಾಗುವುದರಿಂದ ಅದು ಅವನ ಅರಿವಳಿಕೆಯಲ್ಲಿ ಪ್ರವೇಶ ಮಾಡುವುದು. ಬಲಭಾಗದ ಮೆದುಳು ಮಾತ್ರವೇ ಗುರಿಯೊಂದಿಗಿರುವ ವ್ಯಕ್ತಿಯ ಭಾವನಾತ್ಮಕ ಸಂಬಂಧವನ್ನು ತಿಳಿದುಕೊಳ್ಳಬಲ್ಲದು.

ಗುರಿಯ ಈಡೇರಿಕೆಯ ಸಂದರ್ಭದಲ್ಲಿ ಉಂಟಾಗುವ ದುಸ್ತರ ಪರಿಸ್ಥಿತಿಯನ್ನು ಎಡಭಾಗದ ಮೆದುಳು ತನ್ನ ತರ್ಕಬದ್ಧ ಮತ್ತು ವಿಶ್ಲೇಷಾತ್ಮಕ ಪ್ರವೃತ್ತಿಯ ಕಾರಣದಿಂದ ಗುರಿಯನ್ನು ಮುಟ್ಟುವುದು ಎಷ್ಟು ಅಸಾಧ್ಯವಾಗಿದೆ ಯೆಂಬುದನ್ನು ಸೂಚಿಸುತ್ತದೆ. ಎದುರಿಸಬೇಕಾದ ಸಮಸ್ಯೆಗಳು ಎಷ್ಟು ಗುರುತರವಾಗಿವೆ ಮತ್ತು ಮನಸ್ಸಿನ ಮೇಲೆ ಅವುಗಳೇ ರಾಜಾಜಿಸುವಂತೆ ಮಾಡಿದಲ್ಲಿ ವ್ಯಕ್ತಿಯು ತನ್ನ ಗುರಿಯನ್ನು ಹೇಗೆ ಕೈಬಿಡಬೇಕಾಗುತ್ತದೆ ಎಂಬುದನ್ನೂ ಅದು ಸೂಚಿಸುತ್ತದೆ.

ಗುರಿಯನ್ನು ಅರ್ಥೈಸುವ ಬಲಭಾಗದ ಮೆದುಳಿನ ಕ್ರಮವೇ ಭಿನ್ನವಾಗಿದೆ. ಅದು ತರ್ಕ ಮಾಡುವುದಿಲ್ಲ. ಬದಲಾಗಿ ತತ್ಕಾಲ ಸ್ಫುರಿಸುವ ಸ್ವಭಾವವುಳ್ಳದ್ದಾಗಿದೆ ಮತ್ತು ಗುರಿಯನ್ನು ಮುಟ್ಟುವುದಕ್ಕಾಗಿ ಹೊಸ ಕ್ರಮಗಳ ಬಗ್ಗೆಯೂ ಆಲೋಚಿಸುತ್ತದೆ. ಅಲ್ಲದೆ, ಅದು ಗುರಿಯ ಸಾಧನೆಯಾದುದರ ಅಂತಿಮ ಘಟ್ಟವನ್ನು ಊಹಿಸಿಕೊಂಡಿರುತ್ತದಾದ್ದರಿಂದ ಸಾಧನೆಯ ಸಂತೋಷದಲ್ಲಿರುವುದು ಎಷ್ಟು ಚೆನ್ನ ಎಂಬುದು ಅದಕ್ಕೆ ಗೊತ್ತಾಗಿ ನಿಜವಾದ ಗುರಿಯನ್ನು ಮುಟ್ಟಲು ಆಗತ್ಯವಾದ ಹೊಸ ಹಾಗೂ ಪರ್ಯಾಯ ಕ್ರಮಗಳು ದೊರೆಯುವವರೆಗೂ ವಿಶ್ರಮಿಸುವುದಿಲ್ಲ.

ಅನೇಕ ಸಲ ಹೊರಗಿನ ವ್ಯವಸ್ಥೆಯಲ್ಲಿರುವ ಕೆಲ ಕಾರಣಗಳಿಂದ ನಾವು

ಬಯಸಿದಂತೆ ಕಾರ್ಯವೆಸಗಲು ಸಾಧ್ಯವಾಗುತ್ತಿಲ್ಲವೆಂದು ಅನಿಸುತ್ತದೆ. ಆದರೆ, ಈ ಅಡಚಣೆ ವ್ಯಕ್ತಿಯ ಹೊರಗೆ ಇಲ್ಲ. ಅದು ಮನಸ್ಸಿನಲ್ಲಿಯೇ ಇದೆ. ಇದಕ್ಕೆಲ್ಲ ಮುಖ್ಯ ಕಾರಣ ಎಡಭಾಗದ ಮೆದುಳು ಪರಿಸ್ಥಿತಿಯನ್ನು ಅರ್ಥಮಾಡಿಕೊಂಡ ರೀತಿ. ಅಂಥ ಪರಿಸ್ಥಿತಿಯಲ್ಲಿ ಬಲಭಾಗದ ಮೆದುಳನ್ನು ಭಾವನಾತ್ಮಕವಾಗಿ ಉದ್ದೀಪನಗೊಳಿಸಿ ಗುರಿಯೊಂದಿಗೆ ಸಂಪರ್ಕ ಹೊಂದುವಂತೆ ಮಾಡಬೇಕು. ಈ ಪ್ರಕ್ರಿಯೆಯ ಫಲವಾಗಿ ವ್ಯಕ್ತಿಯು ತನ್ನಲ್ಲಿ ಆತ್ಮವಿಶ್ವಾಸ ಪಡೆಯುತ್ತಾನೆ ಮತ್ತು ಗುರಿಯನ್ನು ತಲುಪುವ ಬಗ್ಗೆ ಇರುವ ತನ್ನ ಸಾಮರ್ಥ್ಯವನ್ನು ನಂಬುತ್ತಾನೆ.

ಸಮಯದ ನಿರ್ವಹಣಾ ಪ್ರಶಿಕ್ಷಣದ ರೂಪರೇಷೆಗಳಲ್ಲಿ ಭಾವುಕತೆಯನ್ನು ಸೇರಿಸಿಕೊಳ್ಳಬೇಕು ಮತ್ತು ಸಮಯವೆಂಬುದು ಅತ್ಯಂತ ಅಭಾವದ ವಸ್ತು ಮತ್ತು ಸಮಯವನ್ನು ನಿಯಂತ್ರಿಸುವುದರಲ್ಲಿಯೇ ವ್ಯಕ್ತಿಯ ಹಿತ ಮತ್ತು ಶಕ್ತಿ ಇದೆ ಎಂಬ ಮೂಲ ಗ್ರಹಿಕೆಯನ್ನೂ ಹೊಂದಿರಬೇಕು. ಕೇವಲ ಕೆಲವು ನಮೂನೆಗಳನ್ನೂ, ಸೂಚನೆಗಳನ್ನೂ ವಿಚಾರಗಳನ್ನೂ ಕೊಟ್ಟರೆ ಮಾತ್ರ ಸಾಲದು. ಅದರಿಂದ ಹೆಚ್ಚಿಗೆ ಏನನ್ನೂ ಸಾಧಿಸಲಾಗುವುದಿಲ್ಲ. ನಂಬಿಕೆಯ ರೀತಿಯಲ್ಲಿಯೇ ಮೂಲ ಪರಿವರ್ತನೆ ಆದಾಗ ಮಾತ್ರ ಬಾಹ್ಯ ಪರಿವರ್ತನೆಯಲ್ಲಿ ಬದಲಾವಣೆಯಾಗಲು ಸಾಧ್ಯ.

(ಅನು : ಸು. ಕೌ.)

ದೀಪ್ತಿ ದಿವಾಕರ

– ಖುಶ್ವಂತ್ ಸಿಂಗ್

(ದೀಪ್ತಿ ದಿವಾಕರ್ ಅಚ್ಚ ಕನ್ನಡ ಹುಡುಗಿ. ಕರ್ನಾಟಕದ ಶ್ರೇಷ್ಠ ಗಾಂಧೀ ವಿಚಾರದ ಚಿಂತಕರೂ, ವ್ಯಾಖ್ಯಾನಕಾರರೂ ಆಗಿದ್ದ ಹಾಗೂ ಗಾಂಧೀ ಸ್ಮಾರಕ ನಿಧಿಯ ಅಧ್ಯಕ್ಷರೂ, ಬಿಹಾರ್ ರಾಜ್ಯದ ರಾಜ್ಯಪಾಲರೂ, ಲೋಕ ಶಿಕ್ಷಣ ಟ್ರಸ್ಟ್‌ನ ಸಂಸ್ಥಾಪಕ ಅಧ್ಯಕ್ಷರೂ ಆಗಿದ್ದ ರಂಗನಾಥ ರಾಮಚಂದ್ರ ದಿವಾಕರರ ಮೊಮ್ಮಗಳು. ಅವಳ ಸಾಹಸದ ಸಂಕ್ಷಿಪ್ತ ಪರಿಚಯ ಇಲ್ಲಿದೆ. – ಸಂ)

ದೀಪ್ತಿ ಕೆಲವು ವರ್ಷಗಳ ಹಿಂದೆ ನಡೆದ ಸೌಂದರ್ಯ ಸ್ಪರ್ಧೆಯಲ್ಲಿ 'ಮಿಸ್ ಇಂಡಿಯಾ' ಆಗಿ ಆಯ್ಕೆ ಗೊಂಡಿದ್ದಳು. ನಂತರ ವಿಶ್ವಸುಂದರಿಯಾಗಿ ಆಯ್ಕೆ ಆಗಬೇಕೆಂಬ ಮಹತ್ವಾಕಾಂಕ್ಷೆಯಿಂದ ಅಮೇರಿಕದ ಮಿಯಾಮಿ ಎಂಬಲ್ಲಿ

ನಡೆದ ಸೌಂದರ್ಯ ಸ್ಪರ್ಧೆಗಾಗಿ ಹೋದಳು. ಅಲ್ಲಿಗೆ ಹೋದ ಮೇಲೆ ಆ ದೇಶ ಮತ್ತು ಅಲ್ಲಿಯ ಜನತೆಯ ಬಗ್ಗೆ ಪ್ರೇಮ ಬೆಳೆಸಿಕೊಂಡಳು. ಭಾರತದಲ್ಲಿಗಿಂತ ಅಮೇರಿಕಾದಲ್ಲಿ ಹೆಚ್ಚು ಸಮಾನತೆಯ ಭಾವವಿದೆ, ಹೆಚ್ಚು ಸ್ವಾತಂತ್ರ್ಯವಿದೆ ಹಾಗೂ ಉಸಿರುಗಟ್ಟುವ ವಾತಾವರಣ ಹೊಂದಿರುವ ತನ್ನ ತವರೂರಾದ ಬೆಂಗಳೂರಿಗಿಂತ ಅಮೇರಿಕಾದಲ್ಲಿದ್ದರೆ ತಾನು ಹೆಚ್ಚು ಸಂತೋಷ ವಾಗಿರಬಹುದೆಂದು ತೀರ್ಮಾನಿಸಿದಳು. ಬಹಳ ಗೌರವಯುತವಾದ ದಿವಾಕರರ ಕುಟುಂಬದಲ್ಲಿ ಜನಿಸಿದ ಅವಳಿಗೆ ಈ ತೀರ್ಮಾನ ಕೈಗೊಳ್ಳುವುದು ಕಷ್ಟಕರವಾಗಿರ ಬಹುದು. ಅವಳ ತಂದೆ ಸಂಯುಕ್ತ ಕರ್ನಾಟಕ ಪತ್ರಿಕೆಯ ಸಂಪಾದಕರಾಗಿ ದ್ದರು. ತಾಯಿ ಒಂದು ಕಾಲೇಜಿನ ಪ್ರಾಂಶುಪಾಲರಾಗಿದ್ದರು. ದೀಪ್ತಿ ಕಟ್ಟಡ ವಿನ್ಯಾಸ ಶಾಸ್ತ್ರವನ್ನು ಓದಿದ್ದಳು. ಐದು ವರ್ಷದ ಬಾಲಕಿಯಾಗಿದ್ದಾಗಿನಿಂದ ಭರತ ನಾಟ್ಯವನ್ನು ಕಲಿತಿದ್ದಳು. ಶಾಲೆ-ಕಾಲೇಜಿನಲ್ಲಿ ಓದುತ್ತಿದ್ದಾಗಲೇ ಭರತ ನಾಟ್ಯದ ಸಾರ್ವಜನಿಕ ಪ್ರದರ್ಶನ ಕೊಡುತ್ತಿದ್ದಳು, ಹೀಗಿರುವಾಗ "ಭಾರತ ಸುಂದರಿ"ಯಾಗಿ ಆಯ್ಕೆಗೊಂಡು ವಿಶ್ವ ಸುಂದರಿ ಸ್ಪರ್ಧೆಗೆ ಪ್ರವೇಶಿಸಿದ್ದೇ ಅವಳ ಜೀವನ ಕ್ರಮ ಬದಲಾಗಲು ಕಾರಣವಾಯಿತು. ಅವಳ ಒಬ್ಬನೇ ತಮ್ಮ ಅರವಿಂದ ಇಂಜಿನಿಯರನಾಗಿ ಕೆನಡಾದ ಟೋರೊಂಟೋ ಎಂಬಲ್ಲಿ ನೆಲೆಸಿದ್ದಾನೆ. ದೀಪ್ತಿಗೆ ಈಗ ೩೭ ವರ್ಷ. ಇನ್ನೂ ಅವಿವಾಹಿತೆ. ಅಮೇರಿಕದ ಫೆಸಿಫಿಕ್ ತೀರದ ಸಾನ್‌ಫ್ರಾನ್ಸಿಸ್ಕೊ ನಗರದಲ್ಲಿ ಮನೆಮಾಡಿಕೊಂಡು ವಾಸವಾಗಿದ್ದಾಳೆ. ಅಮೇರಿಕಾದಲ್ಲಿಯೇ ಇರಲು ತೀರ್ಮಾನಿಸಿದ ಮೇಲೆ ಭಾರತೀಯ ನೃತ್ಯ ಮತ್ತು ಸಂಸ್ಕೃತಿಯನ್ನು ಅಮೇರಿಕನ್ನರಿಗೆ ವಾಣಿಜ್ಯ ವ್ಯವಹಾರದ ಮೂಲಕ ಪರಿಚಯಿ ಸಲು ತೀರ್ಮಾನಿಸಿದ್ದಾಳೆ. ಆ ದೇಶದ ಉದ್ದಗಲಕ್ಕೂ ನೃತ್ಯ ಪ್ರದರ್ಶನ ಕೊಡುವುದರೊಂದಿಗೆ ವಿವಿಧ ಕೇಂದ್ರಗಳಿಂದ ಬಿತ್ತರಗೊಳ್ಳುವ ದೂರದರ್ಶನ ಹಾಗೂ ಆಕಾಶವಾಣಿಯ ಕಾರ್ಯಕ್ರಮಗಳನ್ನೂ ನೆರವೇರಿಸಿಕೊಡುತ್ತಾಳೆ. ಅವಳ ಇತ್ತೀಚಿಗಿನ ಸಾಧನೆ : ಸಾಹಿತ್ಯಕ ಪ್ರೌಢಿಮೆಗಾಗಿ ದೊರೆತ ಅಮೇರಿಕಾ ಅಧ್ಯಕ್ಷರ ಪ್ರಶಸ್ತಿ. ಅಷ್ಟು ದೂರದಲ್ಲಿದ್ದರೂ ಅವಳಿಗೆ ತನ್ನ ಮಾತೃಭೂಮಿಯ ನೆನಪು ಕಾಡದೇ ಇಲ್ಲ, ಇತ್ತೀಚೆಗೆ ಪ್ರಕಟಗೊಂಡ ಅವಳ "ಕವಿತೆಯೆಂಬ ಮರ" (ದಿ ಟ್ರೀ ವರ್ಸ್) ಎಂಬ ಕವನ ಸಂಕಲನದಲ್ಲಿ "ನಾನು ಭಾರತೀಯಳು" (ಆಯ್ ಎಮ್ ಇಂಡಿಯನ್) ಎಂಬ ಕವನವೂ ಇದೆ.

(ಡೆಕ್ಕನ್ ಹೆರಾಲ್ಡ್ ಪತ್ರಿಕೆಯಿಂದ)

ಕಾಶ್ಮೀರ : ರಾಜಕೀಯ ಪಕ್ಷಗಳ ಚೆಂಡಾಟ !

–ಸುರೇಂದ್ರ ಕೌಲಗಿ

ಕಳೆದ ಒಂದು ತಿಂಗಳಿಂದ ಮುಖ್ಯ ಮಂತ್ರಿ ಫಾರೂಖ್ ಅಬ್ದುಲ್ಲಾ ಕಾಶ್ಮೀರದ ಗುಮ್ಮವನ್ನು ದೇಶದ ಮೇಲೆ ಹರಿಬಿಟ್ಟಿದ್ದಾರೆ. ಕಾಶ್ಮೀರ ಸಮಸ್ಯೆಯ ಉಲ್ಬಣಕ್ಕೆ ಇದುವರೆಗೆ ದಿಲ್ಲಿಯಲ್ಲಿ ರಾಜ್ಯಭಾರ ನಡೆಸಿದ ಎಲ್ಲ ರಾಜಕೀಯ ಪಕ್ಷಗಳು ಸರಿಸಮಾನವಾಗಿ ಕಾರಣವಾಗಿವೆ.

ಕಾಶ್ಮೀರ ಸಮಸ್ಯೆ ಮುಖ್ಯವಾಗಿ ಆರ್ಥಿಕ ಸಮಸ್ಯೆಯಾಗಿದೆ ಎಂಬುದು ಹಿಂದಿನ ಮತ್ತು ಇಂದಿನ ಎಲ್ಲ ಪ್ರಧಾನಿಗಳಿಗೆ ಗೊತ್ತಿದ್ದರೂ ಯಾರೂ ಈ ಸಮಸ್ಯೆಯ ಪರಿಹಾರಕ್ಕೆ ಗಂಭೀರವಾದ ಪ್ರಯತ್ನ ನಡೆಸಲಿಲ್ಲ. ಅಲ್ಲದೆ, ಕಾಶ್ಮೀರದ ರಾಜಕಾರಣಿಗಳು ಸಹ ಅಲ್ಲಿಯ ಜನಹಿತ ಕಾರ್ಯಕ್ರಮಗಳಿಗಿಂತ ಜನತೆಯ ಅಸಂತೋಷಕ್ಕೆ ರಾಜಕೀಯ ಮುಖವಾಡ ಹಾಕಿ ತಮ್ಮ ಅಧಿಕಾರ ಲಾಲಸೆಯನ್ನು ತೀರಿಸಿಕೊಳ್ಳುವತ್ತ ಗಮನಹರಿಸಿದ್ದಾರೆ. ಇಂಥದೇ ಒಂದು ಕಾಯಕದಲ್ಲಿ ಇಂದಿನ ಮುಖ್ಯಮಂತ್ರಿ ಡಾ॥ ಫರೂಖ್ ಅಬ್ದುಲ್ಲಾ ಕೂಡ ತೊಡಗಿದ್ದಾರೆ. ದುರ್ಬಲಗೊಳ್ಳುತ್ತಿರುವ ತಮ್ಮ ರಾಜಕೀಯ ಪ್ರಭಾವವನ್ನು ಪುನಶ್ಚೇತನಗೊಳಿಸಲು ಮತ್ತು ತಮ್ಮ ಸರಕಾರದ ವಿಫಲತೆಗಳನ್ನು ಮುಚ್ಚಲು ಅಲ್ಲಿಯ ವಿಧಾನಸಭೆಯಲ್ಲಿ ಸ್ವಾಯತ್ತತೆಯ ಗೊತ್ತುವಳಿಯನ್ನು ಅಂಗೀಕರಿಸುವಂತೆ ಮಾಡಿ ಇಂದು ಉಳಿದೆಲ್ಲ ಸಮಸ್ಯೆಗಳಿಗಿಂತ ಸ್ವಾಯತ್ತತೆಯನ್ನು ಬಹು ಪ್ರಮುಖ ಸಮಸ್ಯೆಯನ್ನು ಮಾಡಿ ದೇಶದ ಮುಂದೆ ಇಟ್ಟಿದ್ದಾರೆ ಫಾರೂಖ್ಅಬ್ದುಲ್ಲಾ. ಸ್ವಾಯತ್ತತೆ ಇಲ್ಲದಿರುವುದೇ ಕಾಶ್ಮೀರದ ಬಡತನ, ನಿರುದ್ಯೋಗ, ನಿರಕ್ಷರತೆ ಮುಂತಾದ ಸಮಸ್ಯೆಗಳಿಗೆ ಕಾರಣವಾಗಿರುವಂತೆ ಅವರು ಮಾತನಾಡುತ್ತಿದ್ದಾರೆ. ಇದು ತಮ್ಮ ಮೇಲೆ ಉಂಟಾಗಬಹುದಾದ ಜನತೆಯ ಆಕ್ರೋಶವನ್ನು ಕೇಂದ್ರ ಸರ್ಕಾರದ ಕಡೆಗೆ ತಿರುಗಿಸುವ ರಾಜಕೀಯ ಜಾಣತನವನ್ನು ಮೆರೆಯುತ್ತಿದ್ದಾರೆ.

೧೯೪೭ ರಲ್ಲಿ ಹುಟ್ಟಿಕೊಂಡ ಕಾಶ್ಮೀರ ಸಮಸ್ಯೆಯ ಪರಿಹಾರಕ್ಕೆ ಸೂಚಿಸಲಾಗಿರುವ ಇದುವರೆಗಿನ ಎಲ್ಲ ಪರಿಹಾರ ಮಾರ್ಗಗಳು ರಾಜಕೀಯ ಲೇಪನವನ್ನೇ ಹೊಂದಿವೆ ಎಂಬುದನ್ನು ನಾವು ಗಮನಿಸಬೇಕು. ಕಾಶ್ಮೀರ ಅಂದರೆ ರಾಜಕೀಯ ಸಮಸ್ಯೆಗಳ ಒಂದು ಕಗ್ಗಂಟು ಎಂಬ ಚಿತ್ರವನ್ನು ದೇಶದ ಮುಂದೆ ಚಿತ್ರಿಸಲಾಗಿದೆ. ಅಲ್ಲಿರಬಹುದಾದ ಇತರ ಸಾಮಾಜಿಕ, ಧಾರ್ಮಿಕ ಹಾಗೂ ಆರ್ಥಿಕ ಸಮಸ್ಯೆಗಳು ಬಹಳ ಗೌಣವಾಗಿ ಉಳಿದಿವೆ. ಕಾಶ್ಮೀರವು ಭಾರತದೊಂದಿಗೆ ಸೇರ್ಪಡೆಯಾಗುವ ಸಂದರ್ಭದಲ್ಲಿ ಭಾರತ ಸರ್ಕಾರದೊಡನೆ ಆದ

"ಸೇರ್ಪಡೆ ಕರಾರುಗಳು" ಮೊದಲುಗೊಂಡು ೧೯೫೩ ರ ವರೆಗೆ ಆದ ಅನೇಕ ಸಂವಿಧಾನಾತ್ಮಕ ಬೆಳವಣಿಗೆಗಳೆಲ್ಲವೂ ಕಾಶ್ಮೀರವನ್ನು ಪ್ರತ್ಯೇಕತಾ ದೃಷ್ಟಿಯಿಂದ ನೋಡುವುದರ ಮೂಲಕವೇ ಆದಂಥಾದ್ದಾಗಿವೆ.

ಕಾಶ್ಮೀರ ರಾಜ್ಯದ ಜಮ್ಮು ಮತ್ತು ಲಡಾಖ ಪ್ರದೇಶಗಳಲ್ಲಿಯ ಜನರ ಅಸ್ತಿತ್ವವನ್ನೇ ಮರೆತುಬಿಡುವಷ್ಟರಮಟ್ಟಿಗೆ ಕಾಶ್ಮೀರ ಸಮಸ್ಯೆಯನ್ನು ರಾಜಕೀಯವಾಗಿ ಬೆಳೆಸಲಾಯಿತು. ಪಾಕಿಸ್ತಾನದ ಅವ್ಯಾಹತ ಕಿರುಕುಳದ ಮಧ್ಯೆಯೂ ಇತರ ಎಲ್ಲ ಪ್ರಕಾರದ ರಾಜಕೀಯ ಚಟುವಟಿಕೆಗಳು ರಾಜ್ಯದಲ್ಲಿ ನಡೆಯಲು ಸಾಧ್ಯವಾಗುವುದಾದರೆ ರಾಜ್ಯದ ಜನತೆಯ ನಿಜವಾದ ಸಮಸ್ಯೆಗಳ ಪರಿಹಾರಕ್ಕೆ ಏಕೆ ಗಮನ ಕೊಡಲು ಸಾಧ್ಯವಾಗಲಿಲ್ಲ ಮತ್ತು ರಾಜಕಿಯೇತರ ಸಮಸ್ಯೆಗಳ ಒಡಲಲ್ಲಿಯೇ ರಾಜಕೀಯ ಸಮಸ್ಯೆಗಳ ಪರಿಹಾರದ ಬೀಜ ಅಡಗಿದೆ ಎಂಬ ಜ್ಞಾನೋದಯ ಏಕೆ ಉಂಟಾಗಲಿಲ್ಲ ಎಂಬುದು ಮೂಲ ಪ್ರಶ್ನೆ.

ಆಡಳಿತಾತ್ಮಕ ವಿಕೇಂದ್ರೀಕರಣದ ತತ್ವವನ್ನು ಅಧಿಕೃತವಾಗಿ ಒಪ್ಪಿಕೊಳ್ಳಲಾಗಿದೆ. ಆ ತತ್ವದ ಪ್ರಕಾರ ಭಾರತದ ಎಲ್ಲ ರಾಜ್ಯಗಳೂ ಎಲ್ಲ ಪ್ರಮುಖ ವಿಷಯಗಳಲ್ಲಿ ಸ್ವಾಯತ್ತತೆಯನ್ನು ಪಡೆಯಬೇಕಾಗಿದೆ. ಕೇವಲ ಕಾಶ್ಮೀರ ರಾಜ್ಯವೊಂದೇ ಅದಕ್ಕೆ ಅಪವಾದವಾಗಬೇಕಿಲ್ಲ. ಆದರೆ ರಾಜ್ಯಗಳ ಆ ಸ್ವಾಯತ್ತತೆ ಭಾರತ ಗಣರಾಜ್ಯದ ಸಂವಿಧಾನದ ಚೌಕಟ್ಟಿನಲ್ಲಿಯೇ ಆಗಬೇಕೆಂಬುದನ್ನು ಡಾ॥ ಫರೂಖ ಅಬ್ದುಲ್ಲ ಮರೆಯಕೂಡದು. ಸ್ವಾಯತ್ತತೆಯ ಹೆಸರಿನಲ್ಲಿ ಪ್ರತ್ಯೇಕತೆಯ ಉದ್ದೇಶ್ಯವನ್ನು ನೆರವೇರಿಸಿಕೊಳ್ಳಲು ಯಾವ ಕಾರಣಕ್ಕೂ ಸಾಧ್ಯವಾಗಕೂಡದು. ಕಾಶ್ಮೀರ ಇಂದು, ಮುಂದು ಮತ್ತು ಎಂದೆಂದೂ ಭಾರತದ ಅವಿಭಾಜ್ಯ ಅಂಗವೇ. **ಕಾಶ್ಮೀರಕ್ಕೆ ಹೆಚ್ಚಿನ ಸ್ವಾಯತ್ತತೆ ಬೇಕಿದ್ದಲ್ಲಿ ಮೊದಲು ಅದು ತನ್ನ ಸಂವಿಧಾನತ್ಮಾಕ ಹಾಗೂ ಭಾವನಾತ್ಮಕ ಪ್ರತ್ಯೇಕತಾ ಅಸ್ತಿತ್ವವನ್ನು ಭಾರತ ಗಣರಾಜ್ಯದಲ್ಲಿ ವಿಸರ್ಜಿಸಲಿ.** ಸಂವಿಧಾನದಲ್ಲಿ ಒಂದು ಉಪಸಂವಿಧಾನ, ಒಂದೇ ದೇಶದಲ್ಲಿ ಇಬ್ಬರು ಪ್ರಧಾನ ಮಂತ್ರಿಗಳು – ಇವು ಯಾವ ರಾಜ್ಯಕ್ಕೂ, ಯಾವ ದೇಶಕ್ಕೂ ಸಂಗತವಲ್ಲ. ದೇಶದ ಎಲ್ಲ ರಾಜ್ಯಗಳಿಗೂ ಯಾವ-ಯಾವ ವಿಷಯಗಳಲ್ಲಿ ಸ್ವಾಯತ್ತತೆ ಉಂಟಾಗಬೇಕು, ಕೇಂದ್ರ ಸರ್ಕಾರದ ವ್ಯಾಪ್ತಿ ಎಷ್ಟು ಈ ಮುಂತಾದ ವಿಷಯಗಳು ಈಗ ರಚಿತವಾಗಿರುವ ನ್ಯಾಯಮೂರ್ತಿ ವೆಂಕಟಾಚಲಯ್ಯ ನೇತೃತ್ವದ ಸಂವಿಧಾನ ಪುನರ್ ಪರಿಶೀಲನಾ ಸಮಿತಿ ಪರಿಶೀಲಿಸಿ ತನ್ನ ವರದಿಯನ್ನು

(೨೧ ನೇ ಪುಟ ನೋಡಿ)

ವಾಚಕರಲ್ಲಿ ನಿವೇದನೆ

"ಜನಪದ ವಿಚಾರ" ೧೩ ವರ್ಷಗಳ ಕಾಲ ಪ್ರಕಟಗೊಂಡು ಮಧ್ಯಂತರದಲ್ಲಿ ಸುಮಾರು ೭–೮ ವರ್ಷಗಳ ಕಾಲ ನಿಂತು ಹೋಗಿತ್ತು. ಅದರ ಪರಿಣಾಮವಾಗಿ ಪತ್ರಿಕಾ ನೋಂದಣಿ ಕಾನೂನು ಪ್ರಕಾರ ಪತ್ರಿಕೆಯ ಹೆಸರು ಸ್ಥಗಿತಗೊಳಿಸಲ್ಪಟ್ಟಿತ್ತು. ಈಗ ಪುನಃ ಅದೇ ಹೆಸರು ಹೊಸದಾಗಿ ಇಲಾಖೆಯಲ್ಲಿ ನೋಂದಣಿಗೊಂಡಿದೆ. ಆದರೆ ಹಳೆಯ ಸಂಪುಟದ ಸಂಖ್ಯೆ ಮತ್ತು ಸಂಚಿಕೆಯ ಸಂಖ್ಯೆ ಮುಂದುವರೆಯುವಂತಿಲ್ಲವಾಗಿದೆ. ಈ ಕಾನೂನಿನ ಕ್ರಮಗಳನ್ನು ಕೈಗೊಳ್ಳಬೇಕಾದ ಹಿನ್ನೆಲೆಯಲ್ಲಿ ಮೇ, ಜೂನ್ ಮತ್ತು ಜುಲೈ ಸಂಚಿಕೆಗಳನ್ನು ಪ್ರಕಟಿಸಲು ಸಾಧ್ಯವಾಗಲಿಲ್ಲ. ಈಗ ಹೊಸ ಸಂಪುಟ ಮತ್ತು ಸಂಚಿಕೆಯ ಸಂಖ್ಯೆಗಳೊಂದಿಗೆ ಆಗಸ್ಟ್ ಮಾಹೆಯಿಂದ ಪ್ರಕಟಗೊಳ್ಳುತ್ತಿದೆಯೆಂದು ತಿಳಿಸಲು ಸಂತೋಷವೆನಿಸುತ್ತದೆ,

ಪ್ರಕಟವಾಗದೇ ಉಳಿದಿರುವ ಹಿಂದಿನ ಮೂರು ಸಂಚಿಕೆಗಳನ್ನು ಚಂದಾದಾರರಿಗೆ ೨೦೦೧ ನೇ ಮಾರ್ಚ್ ವರೆಗೆ ಸರಿದೂಗಿಸಿ ಕೊಡಲಾಗುವುದು.

–ಪ್ರಕಾಶಕರು

ಮುದ್ರಿತ ಪುಸ್ತಕ ತೆರೆದ–ಅಂಚೆ

To–

ಜನಪದ ಸೇವಾ ಟ್ರಸ್ಟ್ ಪರವಾಗಿ ಸುರೇಂದ್ರ ಕೌಲಗಿ ಅವರಿಂದ ಜನಪದ ಸೇವಾ ಟ್ರಸ್ಟ್ ಮುದ್ರಣಾಲಯ ಮೇಲುಕೋಟೆಯಲ್ಲಿ ಸಂಪಾದಿತವಾಗಿ, ಮುದ್ರಿತವಾಗಿ ಪ್ರಕಟಿಸಲ್ಪಟ್ಟಿತು.